# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ


**NESARU** TINGALOLE Vol XXI - 2 ಮಾರ್ಚ್ 2000

### ಈ ಸಂಚಿಕೆಯಲ್ಲಿ

ಸಂಪಾದಕ ಮಂಡಳಿ

**ಕೆ. ರಘುನಾಥ್**
**ಸುಮಾ ದ್ವಾರಕಾನಾಥ್**
**ಭವಾನಿ ಚಂದ್ರಶೇಖರ್**
**ರಮಾ ಕೃಷ್ಣಸ್ವಾಮಿ**
**ಲೀಲಾ ಜೋಯಿಸ್**
**ಕೆ. ಮಂಜುನಾಥಯ್ಯ**
**ಎಂ.ಎ.ಎನ್. ಪ್ರಸಾದ್**

ಅಸೋಸಿಯೇಷನ್ನಿಗೆ ಶ್ರೀ ಕಂಚಿಕಾಮ ಕೋಟಿ ಪೀಠದ ಯತಿದ್ವಯರ ಭೇಟಿ 2
'ಹುಳಿ ಮಾವಿನ ಮರ'ದಡಿಯ ಮಣ್ಣಾದ ಲಂಕೇಶ್ • ರೇಖಾ ಎನ್. ವಿ. 4
ದೇವಿ • ಲಂಕೇಶ್ 6
'ವಿನಾಯಕ' ದರ್ಶನ 8
ಕನ್ನಡದಲ್ಲಿ ಗದ್ಯ ಸಾಹಿತ್ಯ • ವಾಸುದೇವ ಕಾಣೆಮಾರು 10
ಮೂಗು ಅಂತಿದ್ದಾಗೇ ಮೂಗು ಮುರೀ ಬ್ಯಾಡ್ರೀ ಮಾರಾಯ್ರೇ ಓದಿ ನೋಡಿ 11
ಸುತ್ತ-ಮುತ್ತ 13



*ಶ್ರೀ ಕಂಚಿಕಾಮಕೋಟಿ ಪೀಠದ ಹಿರಿಯ ಪೀಠದ ಹಿರಿಯ ಪೀಠಾಧಿಪತಿಗಳಾದ ಶ್ರೀ ಜಯೇಂದ್ರ ಸರಸ್ವತಿ ಸ್ವಾಮಿಗಳಿಂದ ಅಸೋಸಿಯೇಶನ್ನಿನ ಗಣಪತಿಗೆ ಮಂಗಳಾರ್ಚನೆ.*

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

# ಅಸೋಸಿಯೇಷನ್ನಿಗೆ ಶ್ರೀ ಕಂಚಿಕಾಮ ಕೋಟಿ ಪೀಠದ ಯತಿದ್ವಯರ ಭೇಟಿ




ಶ್ರೀ ಕಂಚಿಕಾಮಕೋಟಿ ಪೀಠದ ಹಿರಿಯ ಸ್ವಾಮಿಗಳಾದ ಶ್ರೀ ಜಯೇಂದ್ರ ಸರಸ್ವತಿಯವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸುತ್ತಿರುವುದು.

ಕಂಚಿಕಾಮ ಕೋಟಿ ಪೀಠದ ಇತಿಹಾಸವು ಬಹಳ ಪುರಾತನವಾದದ್ದು. ಸುಮಾರು 2000 ವರ್ಷಗಳ ಹಿಂದೆ ಶ್ರೀ ಶಂಕರಚಾರ್ಯರು ಭಾರತದಲ್ಲಿ ಸನಾತನ ಧರ್ಮವನ್ನು ಪ್ರತಿಷ್ಠಾಪಿಸಿದರು. ದುರಾಚಾರ ಹಿಂಸೆ, ವೈಮನಸ್ಸುಗಳಲ್ಲಿ ತೊಳಲುತ್ತಿದ್ದ ಜನರಿಗೆ ವೇದ ಮಾರ್ಗದ ಸ್ವಚ್ಛ ಸ್ವರೂಪಗಳಾದ ಸತ್ಯ, ದಾನ, ದಯ ಹಾಗೂ ತಪದ ಮಾರ್ಗಗಳನ್ನು ಬದರಿನಾಥ, ಜಗನ್ನಾಥಪುರಿ ಹಾಗೂ ದಕ್ಷಿಣದ ಶಂಗೇರಿಯಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ತಾವು ಸ್ವತಃ ಕಾಂಚೀಪುರದಲ್ಲಿ ನೆಲೆಸಿ ಅಲ್ಲಿಯೇ ತಮ್ಮ ನಶ್ವರ ಶರೀರವನ್ನು ತ್ಯಜಿಸಿದರು. ಬ್ರಾಹ್ಮಣ್ಯವನ್ನು ಎತ್ತಿ ಹಿಡಿದ ಕೀರ್ತಿ ಅವರದು. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ ಅವರ ಕೀರ್ತಿ ಹರಡಿದೆ.

ಇಂಥ ಶ್ರೇಷ್ಠ ಗುರುಗಳ ಶಿಷ್ಯ ಪರಂಪರೆಯಿಂದ ಬಂದವರು ಕಂಚಿಕಾಮಕೋಟಿ ಪೀಠದ ಇಂದಿನ ಸ್ವಾಮಿಗಳು ಶ್ರೀ ಜಯೇಂದ್ರ ಸರಸ್ವತಿಗಳು ಹಾಗೂ ಇವರ ಉತ್ತರಾಧಿಕಾರಿಗಳಾದ ಶ್ರೀ ಶಂಕರ ವಿಜಯೇಂದ್ರ ಸರಸ್ವತಿಗಳು.

ಫೆಬ್ರವರಿ 24ರಂದು ಸಂಜೆ ಈ ಇಬ್ಬರೂ ಸ್ವಾಮಿಗಳು ನಮ್ಮ ಮೈಸೂರು ಅಸೋಸಿಯೇಷನ್ನಿಗೆ ಬಂದಿದ್ದರು. ಇವರನ್ನು ಅಸೋಸಿಯೇಷನ್ನಿನ ಪದಾಧಿಕಾರಿಗಳು ಮಂಗಳವಾದ್ಯಗಳು ಹಾಗೂ ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ಮೊದಲಿಗೆ



ಶ್ರೀ ಪೀಠದ ಪಾದುಕೆಗಳಿಗೆ ಪೂಜಾ ವ್ಯವಸ್ಥೆಯಾಗಿರುವುದು.

ಶ್ರೀಮತಿ ಭರಣಿ ಪ್ರಸನ್ನ ಇವರಿಂದ ಪ್ರಾರ್ಥನ ಗೀತೆಯಾಯಿತು. ನಂತರ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಅವರು ಸ್ವಾಗತ ಭಾಷಣ ಮಾಡಿ ಸ್ವಾಮಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಪ್ರಸಾದ್ ಹಾಗೂ ಶ್ರೀಮತಿ ಭಾರತಿ ಪ್ರಸಾದ್‌ರವರು ಪೀಠದಿಂದ ತಂದ ಪಾದುಕೆಗಳಿಗೆ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದರು.

ಹಿರಿಯ ಸ್ವಾಮಿಗಳು ಕಾರ್ಯನಿಮಿತ್ತ ಬರುವುದು ಸ್ವಲ್ಪ ತಡವಾದುದರಿಂದ ಕಿರಿಯ ಸ್ವಾಮಿಗಳು ಅಸೋಸಿಯೇಷನ್ನಿನಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ಗಣಪತಿಯ ಮೂರ್ತಿಗೆ ಪೂಜೆ ಮಂಗಳಾರತಿಯನ್ನು ಸಲ್ಲಿಸಿ ನಂತರ ಸಭೆಯನ್ನು




ಶ್ರೀ ಕಂಚಿಕಾಮಕೋಟಿ ಪೀಠದ ಕಿರಿಯ ಸ್ವಾಮಿಗಳಾದ ಶ್ರೀ ಶಂಕರ ವಿಜಯೇಂದ್ರ ಸ್ವಾಮಿಗಳು ವಿಜಯಗೈಯುತ್ತಿರುವುದು.

ದ್ದೇಶಿಸಿ ಮಾತನಾಡಿದರು. ಅವರು ನಮ್ಮ ಕರ್ನಾಟಕದ ಬಗ್ಗೆ ಬಹಳ ಸಂತೋಷ ವ್ಯಕ್ತ ಪಡಿಸಿದರು, ಆದರೆ ಬೀಜಾಪುರ ಗುಲ್ಬರ್ಗ ಮೊದಲಾದೆಡೆ ಮಳೆಯ ತೊಂದರೆಯ ಬಗ್ಗೆ ಸ್ವಲ್ಪ ಕಳವಳ ಪಟ್ಟರು. ಹಲವು ಕ್ಷೇತ್ರಗಳಾದ ಉಡುಪಿ, ಧರ್ಮಸ್ಥಳ ಶೃಂಗೇರಿ ಮೊದಲಾದ ಕಡೆ ನಿರಂತರ ಅನ್ನದಾನದ ಬಗ್ಗೆ ಬಹಳ ಹೆಮ್ಮೆ ವ್ಯಕ್ತ ಪಡಿಸಿದರು. ಎಲ್ಲ ದಾನಕ್ಕಿಂತ ಶ್ರೇಷ್ಠವಾದದ್ದು ಅನ್ನದಾನ ಹಾಗೂ ವಿದ್ಯಾದಾನ, ಇವರು ಅತ್ಯಂತ ಕಿರಿಯ ವಯಸ್ಸಿನಲ್ಲೇ ವೇದ ಶಾಸ್ತ್ರ ಮೊದಲಾದ ವಿದ್ಯೆಗಳಲ್ಲಿ ಪಾರಂಗತರಾಗಿದ್ದಾರೆ. ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ. ಅನೇಕ ಚಿಕಿತ್ಸಾಲಯಗಳು, ಸಂಸ್ಕೃತ ಹಾಗೂ ವೇದ ಪಾಠ ಶಾಲೆಗಳನ್ನು ನಡೆಸುತ್ತಾರೆ. ಮುಂಬೈನಂತ ವೇಗದ ಗತಿಯ ಜೀವನ ಶೈಲಿಯ ನಗರದಲ್ಲಿ ಇಂದಿಗೂ



ಅಸೋಸಿಯೇಷನ್ನಿನ ಕಾರ್ಯದರ್ಶಿಯವರಾದ ಶ್ರೀ ಪ್ರಸಾದ್ ಹಾಗೂ ಶ್ರೀಮತಿ ಭಾರತಿ ಶ್ರೀ ಪೀಠದ ಪಾದುಕೆಗಳಿಗೆ ಪೂಜೆ ಮಾಡುತ್ತಿದ್ದಾರೆ.



ಶ್ರೀ ಶಂಕರ ವಿಜಯೇಂದ್ರ ಸ್ವಾಮಿಗಳು ಅಸೋಸಿಯೇಷನ್ನಿನಲ್ಲಿ ನೆರೆದ ಭಕ್ತಾದಿಗಳನ್ನು ಉದ್ದೇಶಿಸಿ ಅನುಗ್ರಹ ಭಾಷಣ ಮಾಡುತ್ತಿದ್ದಾರೆ.

ಶಂಕರ ಮಠದಲ್ಲಿ ವೇದಾಧ್ಯಯನವು ನಡೆಯುತ್ತದೆ.

ಹಿರಿಯ ಸ್ವಾಮಿಗಳು ಆ ಹೊತ್ತಿಗೆ ಆಗಮಿಸಿದ್ದರು, ಇವರು ಈ ಪೀಠದ 69ನೆಯ ಪೀಠಾಧಿಪತಿಗಳು, ಅವರೂ ಶ್ರೀ ಗಣಪತಿಯ ಮೂರ್ತಿಗೆ ಪೂಜೆ ಮಂಗಳಾರತಿಯನ್ನು ಸಲ್ಲಿಸಿದರು. ಸಮಯದ ಅಭಾವವಾದ್ದರಿಂದ ಹೆಚ್ಚು ಮಾತನಾಡಲಿಲ್ಲ. ಅವರು ದೇವರ ಹಾಗೂ ಮನುಷ್ಯನ ಸಂಬಂಧದ ಕುರಿತು ಮಾತನಾಡಿದರು. ಮನುಷ್ಯನು ಭಕ್ತಿ ಮಾರ್ಗದಲ್ಲಿ ನಡೆಯಬೇಕು. ' ಸತ್ಯ ಮತ್ತು ನ್ಯಾಯ ತತ್ಪರನಾಗಿರಬೇಕು, ಹಾಗಾದಲ್ಲಿ ದೇವರು ಒಲಿಯುತ್ತಾನೆ ಎಂದು ಹೇಳಿ, ಎಲ್ಲರಿಗೂ ದೇವರು ಒಳ್ಳೆಯದನ್ನು ಮಾಡಲಿ ಎಂದು ಆಶೀರ್ವದಿಸಿದರು. ನಂತರ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಅವರು ಅಸೋಸಿಯೇಷನ್ನಿನ ಹಾಗೂ ಸದಸ್ಯರ ಪರವಾಗಿ ಸ್ವಾಮಿಗಳಿಗೆ ಫಲ ತಾಂಬೂಲ ಹಾಗೂ ಕಿರುಕಾಣಿಕೆಯನ್ನು ಅರ್ಪಿಸಿದರು.

ನಂತರ ಎಲ್ಲರೂ ಸ್ವಾಮಿಗಳಿಗೆ ನಮಸ್ಕರಿಸಿ ಫಲ ಮಂತ್ರಾಕ್ಷತೆ, ಆಶೀರ್ವಾದ ಪಡೆದರು. ಶ್ರೀ ಪ್ರಸಾದರವರು ವಂದನಾರ್ಪಣೆ ಮಾಡಿದರು. ಕೇವಲ ಒಂದೂವರೆ ಮಾಸದ ಅಂತರದಲ್ಲಿ ಎರಡು ಮಠಗಳ ಪರಕಾಲ, ಕಂಚಿ) ಸ್ವಾಮಿಗಳು ಭೇಟಿಕೊಟ್ಟು ಎಲ್ಲರನ್ನು ಆಶೀರ್ವದಿಸಿದ್ದು ನಮ್ಮೆಲ್ಲರ ಸೌಭಾಗ್ಯ.



ಶ್ರೀ ಜಯೇಂದ್ರ ಸ್ವಾಮಿಗಳಿಗೆ ಶ್ರೀ ದೊರೆಸ್ವಾಮಿ ಹಾಗೂ ಶ್ರೀ ಪ್ರಸಾದ್ ಕಾಣಿಕೆಯನ್ನು ಅರ್ಪಿಸುತ್ತಿದ್ದಾರೆ.

# 'ಹುಳಿ ಮಾವಿನ ಮರ'ದಡಿಯ ಮಣ್ಣಾದ ಲಂಕೇಶ್

✍ ರೇಖಾ ಎನ್. ವಿ.

ಆದ್ದರಿಂದಲೆ ನಾನು ತೆರಳಬೇಕಾಗಿದೆ
ಮದುವೆ, ಸಂಭ್ರಮ, ಸಂಗೀವಿಲ್ಲದೆ
ದುಃಖದಲ್ಲಿ ಗೆಳೆಯರಿಲ್ಲದೆ ನನ್ನ-ಬೀಳ್ಕೊಡಲು
ಇಂದಿನಿಂದೆನಗೆ ಬೆಳಕಿಲ್ಲ ಹೊತ್ತು ಮೂಡುವುದಿಲ್ಲ
ನನಗೆ

(ಅಂತಿಗೊನೆ ನಾಟಕದಿಂದ)

ಜನವರಿ 24ರಂದು ಪತ್ರಿಕೆಯ ಕಛೇರಿಯಿಂದ ತಮ್ಮ ಕಾರ್ಯ ನಿರ್ವಹಿಸಿದ್ದ ಮನೆ ಸೇರಿದ ಲಂಕೇಶ್‌ರಿಗೆ ಮಾರನೆಯ ಬೆಳಗು ತಾವು ಕಾಣುವುದಿಲ್ಲ ಎಂಬ ಕಲ್ಪನೆ ಇದ್ದಿರಲಾರದು. ಲಂಕೇಶ್ ಮೇಷ್ಟ್ರು ಇನ್ನಿಲ್ಲ ಅಂತಾ ತಿಳಿದಾಗ ದುಃಖ ಆಯಿತು. ಏನನ್ನೋ ಕಳೆದುಕೊಂಡ ನೋವು. ಪ್ರತಿವಾರ ತಮ್ಮ ಪತ್ರಿಕೆಯ ಮೂಲಕ ದಿಟ್ಟತನದಿಂದ ಮಾತನಾಡುತ್ತಿದ್ದ ದನಿಯೊಂದು ಇಲ್ಲವಾದಂತೆ ನಿಶ್ಶಬ್ದ.

ತಮ್ಮ ಆತ್ಮಕಥನ, 'ಹುಳಿ ಮಾವಿನ ಮರ'ದ ಪ್ರತಿಯೊಂದನ್ನು ಕಳುಹಿಸಿದ ಲಂಕೇಶ್ 'ಓದಿ ನಿಮ್ಮ ಅನಿಸಿಕೆಗಳನ್ನು ತಿಳಿಸಿ' ಎಂದಿದ್ದರು. ಅವರ ಆತ್ಮಕಥನ ಓದಿದೆನಾದರೂ ಬರೆಯಬೇಕೆಂಬ ಅನಿಸಿಕೆ ತೀವ್ರವಾಗದೆ ಸುಮ್ಮನುಳಿದಿದ್ದೆ. ಅವರ ಸಾವು ನನ್ನಲ್ಲಿ ಈ ಬಗ್ಗೆ guilt ಜಾಗೃತಗೊಳಿಸಿದಾಗ ಮತ್ತೆ ಅವರ ಆತ್ಮಕಥನ ಓದಿದೆ. ಈ ಬಾರಿಯ ಓದಿಗಿದ್ದ ಅವರ ಸಾವಿನ ಹಿನ್ನೆಲೆಯಲ್ಲಿ ಅಲ್ಲಿನ ದ್ವಂದ್ವಗಳು, ತುಮುಲಗಳು, ಕಾತರ ಭಯಗಳು, ಅಸಹಾಯಕತೆ ಅವಮಾನಗಳು ನನ್ನನ್ನು ಬೇರೆಯದೇ ರೀತಿಯಲ್ಲಿ ತಟ್ಟಿತು. ಈಗ ನಮ್ಮ ಪಾಲಿಗೆ ಲಂಕೇಶರ ನೆನಪು ಮಾತ್ರ. ಅಪರೂಪದ ಹೆಸರನ್ನು ಹೊಂದಿ ತಮ್ಮ ಸ್ವಭಾವ ವೈಪರಿತ್ಯಗಳಿಂದ ಬಾಳಿ ಬದುಕಿದ ಚೇತನದ ಒಂದು ಇಣುಕು ನೋಟವನ್ನು ಈ ಲೇಖನದಲ್ಲಿ ಹಿಡಿದಿಡುವ ಮೂಲಕ ಅವರನ್ನಿಲ್ಲಿ ಸ್ಮರಿಸಿ ಕೊಂಡಿದ್ದೇನೆ.

ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಸಾಧಕರಲ್ಲಿ ಒಬ್ಬರಾದ ಸಾಹಿತಿ - ಪತ್ರಕರ್ತ ಲಂಕೇಶ್. ನವೋದಯ - ನವ್ಯ ನವ್ಯೋತ್ತರ ಚಳವಳಿಗಳ ಅಂತಃ ಸತ್ವವನ್ನು ಮೈಗೂಡಿಸಿಕೊಂಡು ಕಾವ್ಯ - ಕಥೆ - ಕಾದಂಬರಿ - ನಾಟಕ - ಅನುವಾದ - ವಿಮರ್ಶೆ ಈ ಎಲ್ಲಾ ಪ್ರಕಾರಗಳಲ್ಲಿ, ಜನತೆಗೆ ಚಲನಚಿತ್ರ ಹಾಗೂ ಪತ್ರಿಕೋದ್ಯಮ ವಲಯಗಳಲ್ಲಿ 'ಲಂಕೇಶ್ ಛಾಪ'ನ್ನವರು ಮೂಡಿಸಿದ್ದಾರೆ.

ಲಂಕೇಶರದು ದೈತ್ಯ ಪ್ರತಿಭೆ. ವಾದ ವಿವಾದಗಳನ್ನು ಸೃಷ್ಟಿಸುತ್ತಾ ಸಮಾಜ ಹಾಗೂ ಸಾಹಿತ್ಯದ ಕ್ಷೇತ್ರಗಳನ್ನು ಆರೋಗ್ಯವಂತವಾಗಿ ಮತ್ತು ಜಾಗ್ರವಾಗಿಡುವ ಪ್ರಯತ್ನ ಲಂಕೇಶರ ಬದುಕಿನ ಧ್ಯೇಯವಾಗಿದ್ದಿತು. ಒಂದು ವೈಚಾರಿಕ ಚೇತನದಂತಿದ್ದ ಲಂಕೇಶ್ ತನ್ನ ತೆಕ್ಕೆಗೆ ಸಿಗುವ ವಿಚಾರಗಳನ್ನು ವ್ಯಾಖ್ಯಾನ ಮಾಡುತ್ತಿದ್ದ ರೀತಿ ವಿಸ್ಮಯ ಹುಟ್ಟಿಸುವಂತಹದ್ದು.

ನೆನಪುಗಳಿಗೆ ವಿಚಿತ್ರ. ಮರ - ಹೂವು - ಹಣ್ಣು - ಕಾಯಿ ಇವುಗಳಿಂದ ಖುಷಿಕೊಟ್ಟು ತನ್ನ



ದೈತ್ಯಾಕಾರದಿಂದ ಲಂಕೇಶರ ಬಾಲ್ಯದಲ್ಲಿ ಭಯ ಹುಟ್ಟಿಸಿದ 'ಹುಳಿ ಮಾವಿನ ಮರ' ಮುಂದೆ ತನ್ನದೇ ಹೆಸರಿನಲ್ಲಿ ಅವರ ಆತ್ಮ ಕಥನ ಬರೆಸಿಕೊಂಡಿರುವುದು ಸೋಜಿಗ. ನೂರಾರು ವರ್ಷಗಳ ಜೀವಿತದಿಂದ ಅಮರತ್ವದ ಸಂಕೇತದಂತಿದ್ದ ಹುಳಿ ಮಾವಿನ ಮರ ಲಂಕೇಶರ ಕಾಲೇಜಿನ ದಿನಗಳಲ್ಲಿ ಬಿದ್ದು ಹೋಯಿತು. ಆದರೆ ಕಾಲೇಜು ದಿನಗಳು ಮುಗಿದು ಬದುಕು ಅನಿರೀಕ್ಷಿತ ಪಾತ್ರಗಳಲ್ಲಿ ಬೆಳೆಯುತ್ತಾ ಹೋದಾಗ ಈ ಮರ ಮನಸ್ಸಿನಲ್ಲಿ ಬೆಳೆಯುತ್ತಲೇ ಹೋಯಿತಂತೆ. ಹಾಗಾಗಿ ವಾಟೆ, ಸಸಿ ಗಿಡ - ಮರ ಎಂಬ ಅಧ್ಯಾಯಗಳಲ್ಲಿ ಲಂಕೇಶರು ತಮ್ಮ ಬದುಕಿನ ವಿವಿಧ ಘಟ್ಟಗಳನ್ನ ತೆರೆದಿಡುವ ಪ್ರಯತ್ನವನ್ನಿಲ್ಲಿ ಮಾಡಿದ್ದಾರೆ.

''ಒಂದು ಹುಡುಗನನ್ನು ಬೆಳೆಸುವುದಕ್ಕೆ ಒಂದು ಹಳ್ಳಿಯ ಅಗತ್ಯವಿದೆ' ಎಂದು ಚೈನಾದಲ್ಲಿ ಒಂದು ಹೇಳಿಕೆ ಇದೆ. ಹಳ್ಳಿ ಅದೆಷ್ಟೋ ಚಿಕ್ಕದಾಗಿದ್ದರೂ ನೋಡಲು ಅಷ್ಟೇನೂ ವೈವಿಧ್ಯಮಯ ದೃಶ್ಯ, ಗಂಧ, ರುಚಿಗಳಿಂದ ಕೂಡಿರದಿದ್ದರೂ ಒಬ್ಬ ಹುಡುಗನ ಹುಟ್ಟಿನೊಳಗೆ ಅದು ಅವನಿಗೆ ನೆರವಾಗುವ ರೀತಿ ಮಹತ್ತರವಾದದ್ದು. ಶಿವಮೊಗ್ಗದಿಂದ ಕೆಲವೇ ಮೈಲುಗಳ ದೂರದಲ್ಲಿರುವ ಕೊನಗವಳ್ಳಿಯಲ್ಲಿ ಹುಟ್ಟಿದ ಲಂಕೇಶರು ಮುಂದೆ ಸುತ್ತಮುತ್ತಲ ದೊಡ್ಡ ಹಳ್ಳಿಗಳಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ ಶಿವಮೊಗ್ಗ, ಬೆಂಗಳೂರು, ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಹಳ್ಳಿಯ ಹುಡುಗ ವಿದ್ಯೆಯೇ ಅವನಿಗೆ ಹೊಸದು, ಮಾರ್ಗ ದರ್ಶನವಿಲ್ಲ. ಮನೆಗಿಂತ ಭಿನ್ನವಾದ ಶಾಲೆಯಲ್ಲಿ ತನ್ನ ದಿನಗಳನ್ನವನು ಉಪಯುಕ್ತಗೊಳಿಸಬೇಕಾಗುತ್ತದೆ. ಇಂತಹ ವಾತಾವರಣದಲ್ಲಿ ಬೆಳೆದು ವಿದ್ಯಾಭ್ಯಾಸ ಮುಂದುವರೆಸಲು ಲಂಕೇಶರು ಸಾಕಷ್ಟು ಹೊಂದಾವಣಿಕೆ ಮಾಡಿಕೊಳ್ಳಬೇಕಾಯಿತು.

ಶಾಲಾ ಮಾಸ್ತರುಗಳ ಪ್ರಭಾವ, ವಿದ್ಯಾರ್ಥಿ ದೆಸೆಯಲ್ಲಿ ಹಳ್ಳಿಯ ವಯಸ್ಕರ ಶಿಕ್ಷಣ ಸಮಿತಿಯ ಪುಸ್ತಕ ಭಂಡಾರದಲ್ಲಿ ಓದಿದ ಹಲವಾರು ಪುಸ್ತಕಗಳ ಪ್ರಭಾವ ಅದರಲ್ಲೂ ಟಾಲ್‌ಸ್ಟಾಯ್‌ರ 'ನಮಗೆಷ್ಟು ಭೂಮಿಬೇಕು' ಕತೆಯ ಪ್ರಭಾವ ಲಂಕೇಶರ ಬರಹದಲ್ಲಿ ಕೊನೆಯವರೆಗೂ ದಟ್ಟವಾಗಿ ಕಂಡುಬರುತ್ತಿತ್ತು. ಮಕ್ಕಳ ಬಗ್ಗೆ ಹೆತ್ತವರಿಗೆ ಏನೇನೋ ಕನಸುಗಳು, ಆಶೆಗಳು ಇರುತ್ತದ್ದಲ್ಲವೇ? ಅವೆಲ್ಲಾ ನಿಜವಾಗಲಿ ಬಿಡಲಿ ಆ ಕನಸುಗಳೇ ಸಂತೋಷದ ವಿಷಯಗಳಿರಬೇಕು. ಲಂಕೇಶರ ತಂದೆಯವರಿಗೂ ಮಗ ಡೆಪ್ಯುಟಿ ಕಮಿಷನರ್ ಆಗಬೇಕೆಂಬ ಹಂಬಲವಿತ್ತಂತೆ. ಆದರೆ ಸ್ವತಃ ಲಂಕೇಶರೇ ಬಯಸಿದ್ದು ಡಾಕ್ಟರ್ ಆಗಬೇಕೆಂದು ಕೆಲವೇ ಅಂಕಗಳಿಂದ ಮೆಡಿಕಲ್ ಸೀಟ್ ಸಿಗದಾಗ ಲಂಕೇಶರು ಇಂಗ್ಲೀಷ್ ಆನರ್ಸ್ ಸೇರಿದರು.

ಸಂತೋಷಕ್ಕಾಗಿ ಓದುವ ಸ್ವಭಾವ ರೂಪಿಸಿಕೊಂಡ ಲಂಕೇಶರಿಗೆ ಸಾಹಿತಿಯಾಗುವ ಆಸೆಯಾಗಲೀ, ಒಳ್ಳೆಯ ಪುಸ್ತಕ, ಕೆಟ್ಟ ಪುಸ್ತಕಕ್ಕೆ ಇರುವ ವ್ಯತ್ಯಾಸ ತಿಳಿದುಕೊಳ್ಳಬೇಕೆಂಬ ಗೀಳಿರಲಿಲ್ಲ. ಮನುಷ್ಯನ ಬದುಕು ಹೀಗೆ ಬದಲಾಗುತ್ತದೆ. ಚಿತ್ರ ವಿಚಿತ್ರ ಪ್ರಭಾವಗಳಿಗೆ ಒಳಗಾಗಿ ಆಕಸ್ಮಿತವೆನ್ನುವ

ರೀತಿಯಲ್ಲಿ ಅನಿರೀಕ್ಷಿತ ರೂಪ ಪಡೆಯುತ್ತದೆ ಎಂದು ನೋಡಿದಾಗ ವಿಸ್ಮಯವಾಗುತ್ತದೆ. ಸಾಹಿತ್ಯ ಓದುವ ಹುಚ್ಚು, ಸಾಹಿತಿಗಳ ಪರಿಚಯ ಆಗದಿದ್ದರೆ ಲಂಕೇಶರ ಬದುಕಿನ ದಿಕ್ಕೇ ಬದಲಾಗಬಹುದಿತ್ತು. ತಾವು ಓದಿದ ಶಿವಮೊಗ್ಗ ಕಾಲೇಜಿನಲ್ಲಿ ಅಧ್ಯಾಪನ ನಡೆಸಲು ಶುರುಮಾಡಿದ ಲಂಕೇಶರು ಬೆಂಗಳೂರಿನ ಸಂಪ್ರಟಿ ಕಾಲೇಜು, ಗವರ್ನ್‌ಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜುಗಳಲ್ಲಿ ತಮ್ಮ ವೃತ್ತಿಯನ್ನು ಮುಂದುವರಿಸಿದರು. ಜೊತೆ ಜೊತೆಗೆ ತಮ್ಮ ಕ್ರಿಯಾಶೀಲತೆಗೆ ಸಾಹಿತ್ಯವನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡು ಬರೆಯತೊಡಗಿದರು.

1977ರಲ್ಲಿ ಲಂಕೇಶರು 'ಪಲ್ಲವಿ' ಚಿತ್ರದ ಮೂಲಕ ಚಿತ್ರ ಮಾಡುವ ಸಾಹಸಕ್ಕಿಳಿದರು. ಈ ಪ್ರಾಯೋಗಿಕ ಹೊಸ ಅಲೆಯ ಚಿತ್ರ ನಿರ್ದೇಶನಕ್ಕೆ ಪ್ರಶಸ್ತಿ ಬಂದಿತಾದರೂ ಅವರ ಆರ್ಥಿಕ ಪರಿಸ್ಥಿತಿಯ ಮೇಲೆ ದಟ್ಟ ಪ್ರಭಾವ ಬೀರಿತು. ಪಲ್ಲವಿಯ ಸುಖ ದುಃಖಗಳು ಮುಗಿದು, 'ಅನುರೂಪ' ವಿಫಲವಾಗಿ; 'ಖಂಡವಿದಕೊ ಮಾಂಸವಿದಕೋ' ಚಿತ್ರದಿಂದ ಲಂಕೇಶರ ಹೆಸರು ಹಾಳಾಯಿತು. 'ಸಂಬಳ ಪಡೆಯಲು ಮಾತ್ರ ಕಾಲೇಜಿಗೆ ಬರುವ ಅಧ್ಯಾಪಕ' ಎಂಬ ಅಪಖ್ಯಾತಿಗೆ ಲಂಕೇಶರು ಪಾತ್ರರಾದರು. ಸಿನಿಮಾಗಳ ಕೆಟ್ಟ ಒತ್ತಡ, ವೇಗದ ಬದುಕು, ಭ್ರಮೆಗಳು, ಹುಚ್ಚು ಕನಸುಗಳು ಇವೆಲ್ಲವುಗಳ ಮಧ್ಯೆ ಅಧ್ಯಾಪನದ ಅಧ್ಯಾಯವೂ ಮುಗಿಯುತ್ತಾ ಬಂದಿತು. ಇದೇ ವೇಳೆಗೆ ಪ್ರಜಾವಾಣಿಯಲ್ಲಿ ಕಾಲಂ ಬರೆಯಲು ತೊಡಗಿದ ಲಂಕೇಶರು ತಮ್ಮ ಬರವಣಿಗೆಯ ವಿಶಿಷ್ಟ ಶೈಲಿಯಿಂದ ಓದುಗರ ಮೆಚ್ಚುಗೆಗಳಿಸಿದರು. ಈ ಪ್ರಯತ್ನಕ್ಕೂ ದಕ್ಕೆ ಬಂದಾಗ 'ನಾನೇ ಒಂದು ವಾರ ಪತ್ರಿಕೆ ಮಾಡುತ್ತೇನೆ' ಎಂಬ ಹುಚ್ಚು ಸಾಹಸದಲ್ಲಿ 'ಲಂಕೇಶ್ ಪತ್ರಿಕೆ' ರೂಪುಗೊಂಡಿತು.

ವಿಡಂಬನೆ, ಖಂಡನೆ, ಸ್ಮರಣೆ, ಭಾವುಕತೆ, ವೈಚಾರಿಕತೆ ಎಲ್ಲದರ ಮಿಶ್ರಣವಾದ ಪತ್ರಿಕೆ ವಿಚಿತ್ರ ಪರಿಣಾಮ ಬೀರಿತು. ಶುರುವಾದ ಕೆಲವು ತಿಂಗಳಲ್ಲೇ 'ಪತ್ರಿಕೆ' ಸುತ್ತಲು ತುಂಬಿದ್ದ ಹತಾಶೆ, ಸಿಟ್ಟು, ನೋವು ಮುಂತಾದ್ದನ್ನು ಹೇಳುತ್ತಲೇ ಭ್ರಷ್ಟರನ್ನು ಖಂಡಿಸುತ್ತಾ, ರಾಜಕೀಯವಾಗಿ, ಸಾಮಾಜಿಕವಾಗಿ ಉತ್ತಮ ವ್ಯಕ್ತಿಗಳನ್ನು ಪ್ರೋತ್ಸಾಹಿಸುತ್ತಾ ಓದುಗರ ಪ್ರಜ್ಞೆಯ ಭಾಗವಾಗತೊಡಗಿತು. ದಲಿತರು, ಹಿಂದುಳಿದವರು, ಅಸಹಾಯಕರು ಪತ್ರಿಕೆಯಲ್ಲಿ ದನಿ ಕಂಡುಕೊಂಡರು. ಜನಪ್ರಿಯ ಪತ್ರಿಕೆಗಳು ವ್ಯವಸ್ಥೆಗೆ ಸಮ್ಮತವಾದ ವಿಷಯಗಳನ್ನು ಬರೆಯುತ್ತಿದ್ದಾರೆ. 'ಪತ್ರಿಕೆ' ಜನಕ್ಕೆ ಸಮ್ಮತವಾಗಬಲ್ಲ ವಿಚಾರ ಮಂಡಿಸಿತು. ಜಾಣ ಜಾಣೆಯರ ಪತ್ರಿಕೆಯೆಂಬ ಬಿರುದು ಹೊತ್ತು ಕರ್ನಾಟಕದ ಮೂಲೆ ಮೂಲೆಗಳನ್ನು ತಲುಪಿತು.

''ನಾನು ನನ್ನ 58ನೇ ವರ್ಷದವರೆಗೆ ಆತ್ಮ ಚರಿತ್ರೆ ಬರೆಯುವ ಯೋಚನೆಯೇ ಇರಲಿಲ್ಲ. ಐವತ್ತೆಂಟು ದಾಟುತ್ತಿದ್ದಂತೆ ಆರೋಗ್ಯ ಕೆಟ್ಟು Stock Verification ರೀತಿಯ ಚಿಂತನೆ ಶುರುವಾಯಿತು'' ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿರುವ ಲಂಕೇಶರ ಈ 'ಆತ್ಮಕಥನ' 1997ರಲ್ಲಿ ಪ್ರಕಟಗೊಂಡಾಗ ಅವರಿಗೆ ವಯಸ್ಸು 62 ವರ್ಷಗಳು. ಈ ನಾಲ್ಕು ವರ್ಷಗಳ Stock Verification ನಲ್ಲಿ ಲಂಕೇಶರು ಕಂಡುಂಡ ಬದುಕಿನ ಪುಟಗಳು rewind ಆಗಿ ಲಂಕೇಶರಂಥಾ ದಿಟ್ಟ ನಿಷ್ಠುರವಾದಿಯ ವ್ಯಾಮೋಹ ಮತ್ತು ವಿವಾದಗಳನ್ನು ಬಿಂಬಿಸುವ ಪ್ರಯತ್ನ ಮಾಡಿದ.

''ನಾನು ಚಿಕ್ಕಂದಿನಲ್ಲಿ ಕಂಡ ಯಾವುದೋ ಹೆಣ್ಣು ಮತ್ತೆ ನೆನಪಾಗಿ ಅವಳ ಆಲಿಂಗನ ಇವತ್ತಿಗೂ ಹೃದಯವನ್ನು ಬೆಚ್ಚಗೆ ಮಾಡುತ್ತದೆ. ಅವಳ ಸೆರಗಿನ ವಾಸನೆ ನವಿರೇಳಿಸುತ್ತದೆ. ಆಕೆ ಅವ್ವನೋ, ಅಕ್ಕನೋ, ನೆರೆಯುವಳೋ ಇರಬಹುದು'' -- ಹೀಗೆ ಬದುಕಿನುದ್ದಕ್ಕೂ ಪ್ರತಿಯೊಂದು ಹಂತದಲ್ಲೂ ಹೆಣ್ಣಿನ ವ್ಯಾಮೋಹ ಸೆಳೆತಗಳಿಂದ ಲಂಕೇಶರು ಬಿಡುಗಡೆ ಹೊಂದುವುದೇ ಇಲ್ಲ. ಸಾಮಾಜಿಕ ಸಮಾರಂಭದ ಕ್ಷಣಗಳಲ್ಲಿ ಸಂಪ್ರದಾಯಸ್ಥನಾಗಿ ಹೆಂಡತಿಯ ಪರವಾಗಿದ್ದು ನಿಷ್ಠೆ ಮತ್ತು ವಾಂಛಲ್ಯಗಳ dualityಯೊಂದಿಗೆ ಬದುಕಬೇಕಾದ ದುರಂತದ ಬಗ್ಗೆ ಬರೆದುಕೊಳ್ಳುವ ಲಂಕೇಶರ ಪ್ರೇಮ ಪ್ರಕರಣಗಳು ಬತ್ತಿ ಹೋಗುತ್ತವೆ. ಇಲ್ಲವಾಗಿ ಬಿಡುತ್ತದೆ. ಕುಮಾರಿ, ರೇವತಿ, ಲೀಲಾ ಮತ್ತಿತರ ಹೆಣ್ಣಾಗಳೊಂದಿಗೆ ಸೆಳೆತ, ಪ್ರೇಮ-ವ್ಯಭಿಚಾರ ಯಾವುದೂ ಆಗದೆ ಒಂದು ಬಗೆಯ ಆತ್ಮ ಘಾತಕ ದುಡುಗವಾಗಿ ಬಿಡುತ್ತದೆ.

ಬದುಕು ವಿಚಿತ್ರವಾದದ್ದು. ಇಲ್ಲಿ ಸ್ನೇಹಕ್ಕೆ ನೂರಾರು ಕಾರಣಗಳಿರುವಂತೆಯೋ ದ್ವೇಷಕ್ಕೂ ಹಲವಾರು ಕಾರಣಗಳಿರುತ್ತವೆ. ತಮ್ಮ ನಿಷ್ಠುರವಾದ ಹರಿತವಾದ ಬರವಣಿಗೆಗಳ ಮೂಲಕ ಜನರನ್ನು ಎದುರು ಹಾಕಿಕೊಂಡ ಲಂಕೇಶರದು attacking ಪ್ರವೃತ್ತಿ. ''ನಾನು ಸಾಮಾನ್ಯವಾಗಿ ಎಲ್ಲರಿಗೂ ನೋವುಂಟು ಮಾಡಿದ್ದೇನೆ. ಬರೆಯುವಾಗ ನಾನು ಇದ್ದ ಸಂಗತಿಯನ್ನು ಬರೆಯುತ್ತಿರುವುದಾಗಿ ತಿಳಿದುಕೊಂಡಿರುತ್ತೇನೆ. ಆದರೆ ಆ ಬರವಣಿಗೆ ಅನೇಕ ರೀತಿಯಲ್ಲಿ ಬರೆಸಿಕೊಂಡವರಿಗೆ ನೋವನ್ನುಂಟು ಮಾಡಿರುತ್ತದೆ. ಹಾಗೆಯೇ ಟೀಕಿಸಲ್ಪಟ್ಟವರೇ ಕೆಲವು ಸಲ ಪ್ರಶಂಸೆ ಪಡೆದಿರುತ್ತಾರೆ. ಇದೊಂದು ಮಹಾ complex ವಿಷಯ ಅಂತುಂದ್ದು ಕೊಳ್ಳುತ್ತಲೇ ತಮ್ಮ ಬರವಣಿಗೆಯ ದಾಟಿ ಬದಲಿಸಿಕೊಳ್ಳಲಾರದ ಲಂಕೇಶರು ''Style is the Mow'' ಎಂಬಂತಾಗಿ ಬಿಟ್ಟಿದ್ದರು.

ಮನುಷ್ಯನನ್ನು ತಲ್ಲಣಗೊಳಿಸುವ ರೋಗ, ಮುಪ್ಪು, ಸಾವು, ಪ್ರತಿಯೊಬ್ಬನ ಆಳದಿಂದ ಎಚ್ಚರಿಕೆ ನೀಡುತ್ತಿರುತ್ತದೆ. ಒಂದೇ ಕಣ್ಣಿನಲ್ಲಿ ನೋಡುತ್ತಾ, ಡಯಾಬಿಟಿಸ್‌ನ ಬೇಸರ, ರಕ್ತದೊತ್ತಡದ ತಳಮಳ ಅನುಭವಿಸುವಾಗ ಸಾವಿನ ಶಾಕ್ ಮಾತ್ರ ವಾಸ್ತವ ಮಾತ್ರ ಮಿಕ್ಕುಳಿದ ಕ್ಷಣಗಳನ್ನು ಯೋಚಿಸುವಂತೆ ಮಾಡುವುದು ಎಂಬ ದ್ವಂದ್ವ ಲಂಕೇಶರ ಅನುಭವಕ್ಕೆ ಬಂದಿತು. ಮನುಷ್ಯ ಯಾವ ಸನ್ನಿವೇಶದಲ್ಲಿ ಯಾವ ರೀತಿ ವರ್ತಿಸುತ್ತಾನೆ. ಯಾಕೆ ವರ್ತಿಸುತ್ತಾನೆ ಎಂಬುದೆಷ್ಟು ನಿಗೂಢ. ಕಾಯಿಲೆ ತೀವ್ರವಾದರೆ ಸಾವು ಗುಣವಾದರೆ ದೈಹಿಕ ದೌರ್ಬಲ್ಯ... ಕಾಯಿಲೆಯ ಈ ಎರಡು ಮುಖಗಳ ಬಗ್ಗೆ ಯೋಚಿಸಿದಂತೆ ಬರೆಯುವ ಕೆಲಸದಲ್ಲಿ ತೊಡಗಿಸಿಕೊಂಡ ಲಂಕೇಶರು ತಮ್ಮ ಕೊನೆಯ ದಿನದವರೆಗೂ ಬರೆಯುವ ಕೆಲಸ ನಿಲ್ಲಿಸಲಿಲ್ಲ.

"ನನ್ನ ದೇಹ ಒಡಕು ಮಡಕೆಯಾಗಿದೆ. ಯಾವಾಗ ಬೇಕಾದರೂ ಚೂರು ಚೂರು ಅಗಬಹುದು. ಈ ಮಧ್ಯೆ ನಾನೇನೋ ಬರೆಯಬೇಕೆನ್ನಿಸುತ್ತದೆ. ಆದರೆ ದೇಹದಲ್ಲಿ ಚೈತನ್ಯವಿಲ್ಲ" ಎಂಬ ಚಡಪಡಿಕೆಯನ್ನು ಗೆಳೆಯರೊಂದಿಗೆ ಹೇಳಿಕೊಂಡ ಲಂಕೇಶ್ ತಮ್ಮ ನೋವಿನಲ್ಲಿ ಒಬ್ಬಂಟಿಯಾದರು. ಯಾರಿಗೂ ತಿಳಿಯದಂತೆ ನಿರ್ಗಮಿಸಿದರು.

ಪ್ರತಿಯೊಂದು ಆತ್ಮಕಥೆಯೂ ಒಂದು ಬಗೆಯ ಕಾದಂಬರಿ. ನಡೆದಿದ್ದರಲ್ಲಿ ಬೇರು ಬಿಟ್ಟ ಕಾದಂಬರಿ. ಕೊನೆ ಕಾಣಿಸಲಾಗದ ಅಂತ್ಯ ಸೂಚಿಸಲಾಗದ ಕಾದಂಬರಿ.

ಬೆಂಗಳೂರಿನ ಸಮೀಪದಲ್ಲಿನ ತಮ್ಮ ತೋಟದ ಒಂದು ಮಾವಿನ ಮರದಡಿಯಲ್ಲಿ ಲಂಕೇಶರ ಸೂಚನೆಯಂತೆ ಅವರನ್ನು ಮಣ್ಣು ಮಾಡಲಾಯಿತು. ತಮ್ಮ ಪ್ರಿಯವಾದ ಮಾವಿನ ಮರದಡಿಯಲ್ಲಿ ಚಿರನಿದ್ರೆಗೈಯ್ದ ಲಂಕೇಶರು ಮಣ್ಣಾಗಿ 'ಹುಳಿ ಮಾವಿನ ಮರ'ದ ಬೇರುಗಳಿಗೆ ಚೇತನರಾದರು.

●

# ದೇವಿ

✍ ಲಂಕೇಶ್

*('ಕಲ್ಲು ಕರಗುವ ಸಮಯ' - ಲಂಕೇಶ್‌ರ ಕಥಾ ಸಂಕಲನದಿಂದ ಆಯ್ದ ಕಥೆ)*

ದೇವಿ ತೀರಾ ಸಾಮಾನ್ಯ ಹೆಂಗಸು: ನಡು ಎತ್ತರದ, ದುಂಡನೆಯ ಮುಖ, ಚುರುಕಾಗಿ ಓಡಾಡುವ ಹೆಣ್ಣು; ಅವಳ ಕಣ್ಣಿನಲ್ಲಿ ಮಾತ್ರ ವಿಶೇಷ. ನೋಡುತ್ತಿದ್ದರೆ ನಿಮ್ಮನ್ನು ಆಳಕ್ಕೆ ಹೀರಿಕೊಳ್ಳುವ, ನಲವತ್ತು ವರ್ಷದಲ್ಲಿ ಕಂಡ ಬದುಕಿನಲ್ಲಿ ನಿಮ್ಮನ್ನು ಈಜಾಡಿಸಿ ಬಿಡುವ, ನೀತಿ ಅನೀತಿ ಮೀರಿದ ತಣ್ಣನೆಯ, ಕ್ರೂರ, ಹಿತಕರ ಸಮುದ್ರ ಆ ಕಣ್ಣುಗಳು. ಅವಳ ಇಬ್ಬರು ಮಕ್ಕಳಿಗೆ ಅವಳನ್ನು ಕಂಡರೆ ಭಯ, ಗೌರವ ಮತ್ತು ಪ್ರೀತಿ. ಗಂಡ ಚಂದ್ರಪ್ಪನಿಗೂ ಅಷ್ಟೆ. ಚಂದ್ರಪ್ಪ, ಹಿರಿಯ ಮಗಳು ಕುಸುಮ, ಕಿರಿಯವಳಾದ ಪ್ರತಿಭಾ, ಅಳಿಯ ಏಕಾಂತ - ಎಲ್ಲರೂ ಇವತ್ತು ದೇವಿಯ ಮನೆಯಲ್ಲಿದ್ದರು. ಇಡೀ ಕುಟುಂಬ ಮತ್ತು ಬೀಗರ ಕಡೆಯ ಸುನಂದ. ಈಕೆ ಏಕಾಂತನ ತಾಯಿ. ತನ್ನ ವಯಸ್ಸಿಗೆ ತೀರಾ ಊದಿಕೊಂಡಿರುವ ಸುನಂದ, ಕುಸುಮ ಮತ್ತು ಏಕಾಂತರ ಪ್ರಸ್ತ ಇವತ್ತು. ಅದೊಂದು ತಮಾಷೆಯ ಪ್ರಸ್ತ. ಇಷ್ಟಾದರೆ ಕತೆಗೆ ಇನ್ನೇನು ಬೇಕು?

ಪ್ರಸ್ತ ಇಟ್ಟುಕೊಂಡ ದೇವಿ ಮತ್ತು ಚಂದ್ರಪ್ಪ. ದೇವಿಯ ಮೊದಲ ಹೆಸರು ದೇವೀರಿ. ಓದಿದ್ದು ಐದನೆ ಕ್ಲಾಸು ಮಾತ್ರ ಹಳ್ಳಿಯ ಹುಡುಗಿಯನ್ನು ಚಂದ್ರಪ್ಪ ಇಪ್ಪತ್ತೆರಡು ವರ್ಷದ ಹಿಂದೆ, ಬಳ್ಳಿಯಿಂದ ಚಪ್ಪರದವರೆಕಾಯಿ ಕಿತ್ತಂತೆ ಕಿತ್ತುಕೊಂಡು ಮದುವೆಯಾಗಿದ್ದ. ಹಾಗೆಂದು ಹೇಳುತ್ತಿದ್ದವಳು ದೇವಿ. ಅವಳ ಮಾತುಗಳಲ್ಲಿ ಕಾವ್ಯ ತಾನೇ ತಾನಾಗಿ ಬರುತ್ತಿತ್ತು. ಅದು ಮಾತುಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿರಲಿಲ್ಲ. ಅವಳ ಹೊಟ್ಟೆಯಿಂದ, ಹೃದಯದಿಂದ ಎದ್ದು ಬಂದಂತೆ ಬರುತ್ತಿತ್ತು. ಚಿಕ್ಕಂದಿನಿಂದಲೂ ಹಾಗೇ, ಚುರುಕಾಗಿ ಓಡಾಡುವ, ಆದರೆ ಆಳದಲ್ಲಿ ತೀವ್ರವಾಗಿ ವೇದಿಸುವ ಜೀವ ಅದು- ದೇವಿಯ ಜೀವ. ತನ್ನ ಸಂವೇದನೆಗಾಗಿಯೇ ಇಟ್ಟುಕೊಂಡಂತೆ ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುತ್ತಾಳೆ. ಬೆಳಗಿದ ಗಿಂಡಿ, ಹೂವಿನ ತಾಬಾಣ, ಹರ್ಷ ಉಕ್ಕಿಸುವಂತಿರುವ ತಪ್ಪಲೆ, ಗಂಗಾಳಗಳು. ಯಾರು ಸ್ಟೈನ್‌ಲೆಸ್ ಸ್ಟೀಲಿನ ಬಗ್ಗೆ ಹೇಳಿದರೂ ದೇವಿ ಮಣಿದಿರಲಿಲ್ಲ. ಅವಳಿಗೆ ಹಿತ್ತಾಳೆ, ತಾಮ್ರವೇ ಇಷ್ಟ. ಅವಳ ದುಂಡು ಮುಖ ಕೋಳಿ ಮೊಟ್ಟೆಯಾಗಿ ಬಿಂಬಿತವಾಗುವ ತಾಮ್ರದ ಗಂಗಾಳ. ಅಚ್ಚುಕಟ್ಟಾಗಿ ಬೆಳೆಸಿದ ಸಂಪಿಗೆ, ನಂದಿ ಬಟ್ಟಲು, ಗುಲಾಬಿಗಳು. ಮನೆ ಎದುರು ಬಣ್ಣ, ನೆರಳು ತುಂಬಿದ ಗಿಡಗಳು.

ಕುಸುಮ ಮತ್ತು ಏಕಾಂತರ ಪ್ರಸ್ತವನ್ನು ಒತ್ತಾಯದಿಂದ ಇಟ್ಟುಕೊಂಡಿದ್ದರು. ಮದುವೆಗೆ ಮುಂಚೆಯೇ ಜೊತೆಗಿದ್ದ, ಕೂಡಿದ ಎಳೆಯರು, ಮದುವೆ ಕೂಡಾ ಶಾಸ್ತ್ರಕ್ಕೆ. ಪರಿಚಯವಾದ ಹತ್ತು ದಿನದಲ್ಲಿ ಮದುವೆ. ಪರಿಚಯವಾದೊಡನೆ ದೇವಿ ಅವರನ್ನು ಕುತೂಹಲದಿಂದ ಗಮನಿಸಿದ್ದಳು; ಅಂಟಿಕೊಂಡವರು ಬಿಡಲಿಲ್ಲ. ಎಲ್ಲೆಂದರಲ್ಲಿ, ಕೈಕೈ ಹಿಡಿದು ರಸ್ತೆಯಲ್ಲಿ, ದೊಡ್ಡ ಮರದ ಬೊಡ್ಡೆಯ ಹಿಂದೆ, ಕುಲುಕುವ ನಗು. ಹಕ್ಕಿಗಳ ತರಹ, ಋತುಮಾನದ ಹಕ್ಕಿಗಳ ತರಹ ಎಂದು ದೇವೀರಿ ನಕ್ಕಿದ್ದಳು. ದೇವೀರಿಯ ಆ ತೆಳು ನಗು, ಮಂದಹಾಸ ಅವಳ ವರ್ಷಗಳನ್ನೆಲ್ಲ ಅಡಗಿಸಿಕೊಂಡಿತ್ತು; ಕಾಲನ ಬಗ್ಗೆ ಮುನಿಸನ್ನು ಕೂಡ. ಬೀಗರು ಬಂದರು, ಅವರೊಂದಿಗೆ ಊಟ, ಹರಟೆ ಆಯಿತು. ಗಂಡ ಚಂದ್ರಪ್ಪ ತನ್ನ ಕಲಿತ ಮಾತನ್ನೆಲ್ಲ ಆಡಿ ಗೆಲುವು ಉಂಟು ಮಾಡಿದ. ದೇವಿ ಪ್ರಸ್ತದ ಮಕ್ಕಳ ಜೊತೆಗೆ, ಕಿರಿಯ ಮಗಳು, ಮಗನ ಜೊತೆಗೆ ಗಟ್ಟಿ ಧ್ವನಿಯಲ್ಲಿ ಕೂಗಾಡಿದಳು; ಅವಳ ಖುಷಿ ಆ ತರಹದ್ದು. ಹಳ್ಳಿಯ ಗಡಸು ಹೋಗಲೇ ಇಲ್ಲ. ಅವಳ ಭಾವ ಪುಟಿಯುತ್ತಿದ್ದುದೇ ಹಳ್ಳಿಯ ಗಟ್ಟಿಗತನದಿಂದ; ವಾಕ್ಯದ ಅಂಚಿನ ಗ್ರಾಮ್ಯದಿಂದ. ಚಿಕ್ಕವರು ತಮಾಷೆ ಮಾಡಿಕೊಂಡರು; ಅಳಿಯ ಏಕಾಂತ ಕುಸುಮಳ ಕಣ್ಣಿಗಿಂತ ಅತ್ತೆ ದೇವಿಯ ಕಣ್ಣು ಉಗ್ರವಾಗಿದ್ದುದು, ಮೃಗತ್ವ ಅಡಗಿಸಿಕೊಂಡಿದ್ದುದು ಗಮನಿಸಿದ. ಗುಟ್ಟು ಮಾಡದೆ ಹೇಳಿ ನಕ್ಕ. ಆದರೆ ದೇವಿಗೆ ಅದು ಪ್ರೀತಿಯ ಅನ್ನಿಸಿಕೆ ಎಂಬುದು ಗೊತ್ತಿತ್ತು; ತನ್ನ ಯೌವ್ವನ ಕರಗಿ ಹೋಗಿರುವುದು ಗೊತ್ತಿತ್ತು. ಮಗಳ ಪ್ರಸ್ತದ ದಿನ ನಾಯ್ಡು ಬಂದಿದ್ದರೆ ಚೆನ್ನಾಗಿತ್ತೆನ್ನಿಸಿತು. ರವಿ ನಾಯ್ಡು; ದೇವಿ ಬಲ್ಲ ಒಬ್ಬನೇ ಒಬ್ಬ ಬುದ್ಧಿ ಜೀವಿ, ಸಿನಿಮಾ ನಿರ್ದೇಶಕ. ಆಕೆಗೆ ಒಮ್ಮೊಮ್ಮೆ ಅನ್ನಿಸುವಂತೆ, ತಮ್ಮನ್ನು ಬಲ್ಲ ಒಬ್ಬನೇ ಮನುಷ್ಯ.

ನಗೆ, ಗದ್ದಲ, ಸ್ಟೀರಿಯೋ ತಣ್ಣಗಾಯಿತು. ರಾತ್ರಿ ಗಾಢವಾಗಿತು. ಬೆಂಗಳೂರಿನ ರಸ್ತೆಗಳು ತಣ್ಣಗಾಗತೊಡಗಿದ್ದವು. 'ಸಾಕ್ ಸಾಕು-ಹೋಗ್ರಿನ್ನ' ಎಂದಳು ದೇವಿ. ವಿವಾಹಿತರನ್ನು ಅವರ ಕೋಣೆಗೆ ಬಿಟ್ಟುಕೊಟ್ಟಳು. ಕ್ರಮೇಣ ಎಲ್ಲ ಪ್ರಶಾಂತ. ಪಕ್ಕದಲ್ಲಿ ಚಂದ್ರಪ್ಪ. ದೇವಿಯ ತುಂಟ ಮನಸ್ಸಿಗೆ ಹೊಳೆಯಿತು. ಇವತ್ತು ತಾನು ಅಜ್ಜಿಯಾಗಿಬಿಡಬಹುದು. ಎಲ್ಲ ನಿದ್ರಿಸುತ್ತಿದ್ದರು. ಗಂಡ ಚಂದ್ರಪ್ಪ ಪಕ್ಕದಲ್ಲಿ ಗೊರಕೆ ಹೊಡೆಯುತ್ತಿದ್ದ. ಆ ಗೊರಕೆ ವಾದ್ಯದಂತಲ್ಲ. ಪಕ್ಕವಾದ್ಯದಂತೆ ಅನ್ನಿಸಿತು. ಅಜ್ಜಿಯಾಗುತ್ತಿರುವುದಕ್ಕೆ ಸಂತೋಷವೋ ಬೇಸರವೋ-ಎಂದು ಮುಗುಳ್ನಕ್ಕಳು. ತಮ್ಮ ಮೊದಲ ರಾತ್ರಿ, ಇಪ್ಪತ್ತೆರಡು ವರ್ಷದ ಹಿಂದೆ. ಕತ್ತಲಲ್ಲೂ ಬೆಳ್ಳಗೆ ಕಾಣುತ್ತಿರುವ ತಲೆ ಚಂದ್ರಪ್ಪ; ಗುಗ್ಗು ಹುಡುಗ. ಆತ ಪದವೀಧರ, ತಾನು ಐದನೇ ಕ್ಲಾಸಿನ ಗ್ರಾಜುಯೇಟ್. ಅವನಿಗೆ ತಹಶೀಲ್ದಾರ್ ಆಫೀಸಿನಲ್ಲಿ ನೌಕರಿ ಸಿಕ್ಕಿದೊಡನೆ ಮದುವೆಯಾಗಿತ್ತು. ಮುಖಕ್ಕೆ ಮುಖ ಕೊಟ್ಟು ನೋಡಲಾರದ, ನಸುಗೆಂಪು ಬಣ್ಣದ, ಆರೋಗ್ಯವಂತ ದೇಹದ ಹುಡುಗ. ಆದರೂ ಏನೆಲ್ಲ ಮಾತಾಡಿದ್ದ; ಸೇವೆಯನ್ನು ಕುರಿತು, ಪ್ರಾಮಾಣಿಕತೆ ಕುರಿತು. ನಡುನಡುವೆ ಇಂಗ್ಲಿಷ್; ಅದರ ಅರ್ಥವನ್ನು ದೇವಿ ಸುಲಭವಾಗಿ ಊಹಿಸಿದ್ದಳು. ಹಳ್ಳಿಯ ಮಾತಾಡಲು ಇಷ್ಟವಾಗದ ಇಂಗ್ಲಿಷ್‌ನಲ್ಲಿ ತೇಲಿಸುವಾತ. ಹೂವು ಮುಚ್ಚುವ ಚಿಗುರೆ ? ಎಂದಿದ್ದಳು, ಸೆಡವು ಮೈಯಿನ, ಅಗಲ ಕಣ್ಣುಗಳ, ತಮಾಷೆಯ ದೇವೀರಿ. ಚಂದ್ರಪ್ಪ 'ದೇವಿ' ಅಂದಾಗ ನಾಟಕೀಯವೆನ್ನಿಸಿ ನಕ್ಕು 'ನಾದ !' ಅಂದಿದ್ದಳು. ಎಲ್ಲ ನಗು ರಾತ್ರಿ ಕರಗಿತ್ತು. ಬೆಳಗ್ಗೆ ಚಂದ್ರಪ್ಪನ ಮೊದಲ ಹಗಲು. ಅವನ ಮನಸ್ಸಿನ ಬಿಗುವು, ತಳಮಳ ಕೂಡ ಅವಳಿಗೆ ತಿಳಿದಿತ್ತು. ಚಿತ್ರದುರ್ಗದ ತಹಶೀಲ್ದಾರರ ಕಚೇರಿಗೆ ಹೋದ ಚಂದ್ರಪ್ಪ. ಅವಳಿಗೆ ಮುತ್ತಿಡದೆ, ಆದರೆ ಅದೇ ಭಾವದಿಂದ. ಚಪ್ಪರದ ಅವರೆಯ ಬಳ್ಳಿಯ ಕುಡಿ ಬೆಂಕಿ ತಾಗಿದಂತಿತ್ತು.

ಸಂಜೆ ಅವನು ಬಂದಾಗ ಮುಖ ನೋಡಿ ಆಘಾತವಾದಂತೆ ಕೂತಳು. ಅವನನ್ನು ಕೇಳಲು ಹೆದರಿಕೆ. ಬೆನ್ನೆಲುಬು ಮುರಿದವನಂತೆ, ಮನಸ್ಸಿನ ಯಾವುದೋ ಆಸರೆ ಕುಸಿದು ಬಿದ್ದಂತೆ. ಆತ ಬದುಕನ್ನು ಮೊತ್ತ ಮೊದಲ ಬಾರಿಗೆ ನೋಡಿ ಬಂದಿದ್ದ. ಗಂಟೆಗಟ್ಟಲೆ ಸುಮ್ಮನಿದ್ದ. ಆದರೆ ಅವನ ಮನಸ್ಸಿನಲ್ಲಿದ್ದ ಚಿತ್ರಗಳು ದೇವಿಗೆ ಅದೆಂತೋ ಹೊಳೆದಿದ್ದವು. ಹುಟ್ಟಿನಿಂದಲೇ ಬದುಕು ಬಲ್ಲ ಹುಡುಗಿ; ಹಿಂಗಾಯಿತ, ಇದು ಹಿಂಗೇತಾನೆ ? ಎಂದು ವಿಷಾದ. ವಿನೋದ ಬೆರೆಸಿದ ದೇವಿಯ ಮಾತು. ತಹಶೀಲ್ದಾರ ಅವನನ್ನು ಖಾಸಗಿ ಭೇಟಿಗೆ ಕರೆದಿದ್ದ. ಲಂಚದ ಉಪನಿಷತ್ ಊದಿದ್ದ. ಅವನ ಕಚೇರಿಯ

ಇತರರೂ ನೇರವಾಗಿ ಅಥವಾ ಸುತ್ತೀ ಬಳಸಿ ಅದನ್ನೇ ಹೇಳಿದ್ದರು. ಪಾಪದ ಚಂದ್ರಪ್ಪ, ದೇವಿ ಅವನನ್ನು ನೇರಗೊಳಿಸಬೇಕಾದರೆ, ಇಕ್ಕಳಕ್ಕೆ ಸಿಕ್ಕಂತೆ ನರಳುತ್ತಿದ್ದವನನ್ನು ಸಹಜಗೊಳಿಸಬೇಕಾದರೆ ಎರಡು ದಿನ ಒದ್ದಾಡಿದ್ದಳು. ಸತಾಯಿಸುವ ಬದುಕು, ಸಾಲದವನಿಗೆ ಸಾವಿ ಗಂಟು ಬಿದ್ದ ಹಾಗೆ-ಎಂದು ಇಡೀ ಸಂದರ್ಭವನ್ನು ವಿವರಿಸಿದ್ದಳು. ಗಂಡ ಸಾಲದವನೇ ? ಬದುಕಿ ಸಾವಿಯೆ ? 'ನಾನು ಈ ಕೆಲಸಕ್ಕೆ ಹೋಗಲ್ಲ' ಅಂದಿದ್ದ ಚಂದ್ರಪ್ಪ, ಆಮೇಲೆ ಸುಮ್ಮನಾಗಿದ್ದ. ಭ್ರಷ್ಟನಾಗದಿದ್ದರೂ ಹೊಂದಿಕೊಂಡಿದ್ದ. ಈ ಬದುಕು ಎಂದರೇನೆಂದು ತಿಳಿದುಕೊಂಡಿದ್ದ.

ಮೊದಲ ರಾತ್ರಿ, ಮೊದಲ ದಿನ, ಕಾಮದ ಹುಟ್ಟು, ಹರ್ಷ, ವಿಷಾದವನ್ನು ಈ ರಾತ್ರಿ ನೆನೆಯುತ್ತಾಳೆ. ಮಗಳು ಕುಸುಮಳ ರಾತ್ರಿ ಇದು. ಮೊದಲ ರಾತ್ರಿ ಕಳೆದು ಹೋಗಿ, ಮೊದಲ ದಿನ ಕೂಡ ಉರುಳಿ ಇಡೀ ಬದುಕನ್ನು ಹುಟ್ಟು, ಖುಷಿ. ವಿಷಾದ ತುಂಬಿಕೊಳ್ಳುತ್ತದೆ; ಗಂಡನ ಆದರ್ಶ, ಹೆಂಡತಿಯ ವಾಸ್ತವ ಪ್ರಜ್ಞೆ-ಎಲ್ಲವನ್ನೂ ನಡೆಸುತ್ತಾ ಹೋಗುತ್ತವೆ. ಬೀಜದೊಳಗಿನ ಜೀವದಂತೆ, ಕೃತ್ಯದ ಪಾಪ ಪ್ರಜ್ಞೆಯಂತೆ, ಹುಟ್ಟು, ಸಂತೋಷ, ವಿಷಾದವನ್ನು ಎಲ್ಲ ದಿನಗಳ ಹಂಚಿಕೊಳ್ಳುತ್ತವೆ. ಎರಡನೆಯ ದಿನ ಚಂದ್ರಪ್ಪ ಕಚೇರಿಗೆ ಹೋಗಿ ಬಂದ-ಅವನ ಮುಖ ಭಯಾನಕವಾಗಿರಲಿಲ್ಲ. ನಿರ್ಲಿಪ್ತವಾಗಿತ್ತು. ಮತ್ತೆ ದೇವಿ ಸಮಾಧಾನ ಮಾಡಬೇಕಾದ ಅಗತ್ಯ ಬೀಳಲಿಲ್ಲ.

* * *

ದೇವಿ ಅನೇಕ ವರ್ಷ ಚಂದ್ರಪ್ಪನ ಮುಖವನ್ನು ಸರಿಯಾಗಿ, ವಿವರ ವಿವರವಾಗಿ ನೋಡಿಯೇ ಇರಲಿಲ್ಲ. ಹಾಗೆ ನೋಡಿದ್ದು ಎರಡೇ ಎರಡು ಸಲ. ಹಲವು ವರ್ಷಗಳಾದ ಮೇಲೆ, ಚಂದ್ರಪ್ಪನಿಗೆ ಅನೇಕ ಬಡ್ತಿ, ವರ್ಗಾವಣೆ ಆದ ಮೇಲೆ. ಹೊರಗೆ ಬಂದೇ ತರಹ ಬದುಕು ದೇವಿಯ ಚತುರತೆ, ಉಲ್ಲಾಸದಿಂದಾಗಿ ಬಣ್ಣ ಬಣ್ಣದ ಚೇತೋಹಾರಿ ಬದುಕಾಗಿತ್ತು. ಮದುವೆಯಾದ ಹನ್ನೊಂದು ವರ್ಷಕ್ಕೆ ಮೈಸೂರಿನ ತಾಲ್ಲೂಕ್ಕೊಂದಕ್ಕೆ ವರ್ಗ ಆಗಿತ್ತು; ಆಗ ಚಂದ್ರಪ್ಪ ತಹಸೀಲ್ದಾರ. ಅಲ್ಲಿದ್ದದ್ದು ಮೂರು ವರ್ಷ ಮಾತ್ರ. ಅಲ್ಲಿಂದ ಹಾಸನದ ಸಕಲೇಶಪುರಕ್ಕೆ ವರ್ಗ ಆಯಿತು. ಅಲ್ಲಿ ಬೇಗ ಮನೆ ಸಿಗಲಿಲ್ಲ; ಹಿಂದಿನ ಅಧಿಕಾರಿ ಕ್ವಾರ್ಟರ್ಸ್ ಬಿಟ್ಟಿರಲಿಲ್ಲ. ದೇವಿ ಮತ್ತು ಕುಸುಮಳನ್ನು ಚಾಮರಾಜ ನಗರದಲ್ಲೇ ಬಿಟ್ಟು ಚಂದ್ರಪ್ಪ ಸಕಲೇಶ ಪುರಕ್ಕೆ ಬಂದಿದ್ದ. ಆದರೆ ಮೇಲಧಿಕಾರಿಗಳಿಂದ ಆದೇಶ- ಮೈಸೂರು ಜಿಲ್ಲೆಯಲ್ಲಿ ಆನೆಗಳಿಂದ ಕೂಡಿದ ಚಿತ್ರ ಮಾಡಲು ರವಿ ನಾಯ್ಡು ಬರುತ್ತಾರೆ, ಸಹಕರಿಸಿ ಎಂಬುದು.

ಚಂದ್ರಪ್ಪನ ಗೈರು ಹಾಜರಿಯಲ್ಲಿ ದೇವಿ ತಾನೇ ನಾಯ್ಡುವಿಗೆ ನೆರವಾಗುವುದಾಗಿ ಹೇಳಿದ್ದಳು. ರವಿ ನಾಯ್ಡು ಮತ್ತು ಅವರ ತಂಡ ಬಂತು. ರವಿ ನಾಯ್ಡು ಚಿತ್ರೀಕರಣ ಮಾಡಲು ಬಿಳಿಗಿರಿರಂಗನ ಬೆಟ್ಟ, ಬಂಡೀಪುರದ ಕಾಡುಗಳಲ್ಲಿ ದೇವಿಯ ಜೊತೆ ಸಂಚರಿಸಿದ. ದೇವಿಯ ಶಿಕ್ಷಣ ಕೂಡಾ ನಾಯ್ಡುವಿಗೆ ಗೊತ್ತಿರಲಿಲ್ಲ; ಐದನೆ ತರಗತಿ ಓದಿದ್ದಾಳೆ ದೇವಿ. ಆದರೆ ತಾರುಣ್ಯವನ್ನು ಹಿಂದೆ ಬಿಟ್ಟು ಪಕ್ವತೆ ತಲುಪಿದ್ದ ದೇವಿ-ಆಕೆಯ ಕಣ್ಣುಗಳಲ್ಲಿ ನಾಯ್ಡು ಕರಗಿ ಹೋದ. ಅವನ ಹೀರೋಯಿನ್ ಪಿನಾಕಿನಿ ಈ ಕಳ್ಳಿಯ ಎದುರು ಸಪ್ಪಗಾದಳು. ಎಳ್ಳು ಹುರಿದಂತೆ ಮಾತಾಡುವ, ಮಿಂಚಿನಂತೆ ಓಡಾಡುವ ದೇವಿ. ಎಲ್ಲಕ್ಕಿಂತ ಹೆಚ್ಚಾಗಿ ಆಕೆಯ ಕುತೂಹಲ. ಸತ್ತ ಸೆಲ್ಯುಲಾಯ್ಡ್ ಹೇಗೆ ಚಲಿಸುತ್ತದೆ ಎಂಬುದರಿಂದ ಹಿಡಿದು ಜೂಂ ಶಾಟ್‌ಗಳವರೆಗೆ, ಕತೆ ಹೇಗೆ ಆಳವಾಗಿರಬೇಕು. ಬದುಕಿನ ವೈಚಿತ್ರ್ಯ ಒಳಗೊಂಡಿರಬೇಕು. ಎಂಬುದರ ವರೆಗೆ ಕುತೂಹಲದ ಜೊತೆಗೆ ಹಿತವಚನ ಆಕೆಯದು. ರವಿ ನಾಯ್ಡುವಿನ ಚಿತ್ರೀಕರಣ ಮಂದವಾಯಿತು. ದೇವಿಯ ಬಗ್ಗೆ ಅವನ ಅಚ್ಚರಿ, ದಿಗ್ಭ್ರಮೆ ಹೆಚ್ಚಾಯಿತು. ಹೀರೋಯಿನ್ ಪಿನಾಕಿನಿ ಯನ್ನು ಅನುಭೋಗಿಸಲೆಂದೇ ಚಿತ್ರದಲ್ಲಿ ಹಾಕಿ ಕೊಂಡು ಬಂದಿದ್ದ ನಾಯ್ಡು ದೇವಿಯ ಆಯಸ್ಕಾಂತ ದಲ್ಲಿ ಸಿಕ್ಕಿ ಹಾಕಿಕೊಂಡ. ಪಿನಾಕಿನಿಯನ್ನು ಮರೆತ. ಚಿತ್ರದ ಕತೆ, ಶಾಟ್‌ಗಳು ಬದಲಾದವು. ದೇವಿಯನ್ನು ಆಕ್ರಮಿಸುವ ಆಶೆ-ಆದರೆ ದೇವಿ ತನ್ನ ಹಳ್ಳಿಗತನದಿಂದ, ಸರಳತೆಯಿಂದ ನಾಯ್ಡುವಿನಿಂದ ಪ್ರತ್ಯೇಕವಾಗಿಯೇ ಇದ್ದಳು. ಮೊದ ಮೊದಲು ಮಗಳು ಕುಸುಮ ಜೊತೆಗೆ ಚಿತ್ರೀಕರಣದ ಹತ್ತಿರ ಬರುತ್ತಿದ್ದ ದೇವಿ ಒಬ್ಬಳೇ ಬರತೊಡಗಿದಳು. ನಾಯ್ಡುವಿನ ಚಿತ್ರೀಕರಣದ ಕೃತಕತೆಯನ್ನು ಕುರಿತು ಮಾತಾಡದ ಅವರನ್ನು ಗೊಂದಲಗೊಳಿಸುವಳು. 'ನೀವು ಇಲ್ಲಿಗೆ ಬರಬೇಡಿ' ಅನ್ನಲು ನಾಯ್ಡುವಿಗೆ ಆಗಲಿಲ್ಲ; ಆಕೆ ದೀಪದಂತೆ ಉರಿಯುತ್ತಿದ್ದಳು.

ಆಕೆಗೆಂದೇ ದೊಡ್ಡ ಪಾರ್ಟಿ ಮಾಡಿದ. ಬೆಳದಿಂಗಳ ರಾತ್ರಿ. ಬಂಡೀಪುರದ ಅರಣ್ಯದ ನಡುವೆ, ಕೆರೆಯ ಪಕ್ಕದಲ್ಲಿ. ಮೈಸೂರಿನ ಅವಳ ಗೆಳೆಯರೆಲ್ಲ ಬಂದಿದ್ದರು. ಅವತ್ತು ಕುಡಿದ ವೇಳೆಯಲ್ಲಿ ದೇವಿಗೆ ತನ್ನ ಪ್ರೇಮವನ್ನೆಲ್ಲ ಹೇಳಿ ಬಿಡುವುದೆಂದು ತೀರ್ಮಾನಿಸಿದ್ದ. ಸ್ಟೀರಿಯೋ ಸಂಗೀತ, ಬೆಳದಿಂಗಳೊಂದಿಗೆ ಸ್ಪರ್ಧಿಸುತ್ತಿದ್ದ ವಿದ್ಯುತ್ ಬೆಳಕು; ಶೂಟಿಂಗ್ ಯೂನಿಟ್‌ನ ಜನರೇಟರ್ ಕಾಡಿನ ನಡುವಿನ ಕೂತು ಗೊಗ್ಗರು ಸದ್ದು ಮಾಡುತ್ತ ಲೈಟ್ ಹೊಮ್ಮಿಸಿತ್ತು. ಗುಲಾಬಿಯ ಗೊಂಚಲುಗಳು, ಪನ್ನೀರಿನ ಅಭಿಷೇಕ. ದೇವಿಗೆ ಪ್ರೀತಿ ಪಾತ್ರವಾದ ತಾಮ್ರ, ಹಿತ್ತಾಳೆಯ ನಿಗಿನಿಗಿ ಪಾತ್ರೆಗಳು. ದೇವಿಗಾಗಿ ತಂದಿದ್ದ ಉಂಗುರ. ಆದರೆ ದೇವಿ ದೂರವೇ ಉಳಿದಂತಿದ್ದಳು. ರವಿ ನಾಯ್ಡು ಅವಳಿಗೆ ತನ್ನ ಜೀವನ ಚರಿತ್ರೆಯನ್ನೆಲ್ಲ ಹೇಳಿದ. ಪಾರ್ಟಿಯ ಒಂದು ಮೂಲೆಯಲ್ಲಿ, ಮರಗಳ ಕೆಳಗೆ, ಹಚ್ಚ ಹಸಿರು ಗರುಕೆ ಸಿನಿಮಾ ಬೆಳಕಲ್ಲಿ ಮುದುಡಿಕೊಂಡಿರುವವರಲ್ಲಿ, 'ಸಿನಿಮಾದಲ್ಲಿ ಫಾಸ್ಟ್ ಮೂವ್‌ಮೆಂಟ್ ಇರುತ್ತದೆ ಗೊತ್ತೆ ?' ಅಂದ ನಾಯ್ಡು. 'ಅಂದ್ರೆ ?' ಅಂದಳು ದೇವಿ. 'ಅಂದ್ರೆ ?' ಎಂದು ನಾಯ್ಡು ಆಕೆಯ ಹಿಂಗದ ಕುತೂಹಲದಿಂದ ಸ್ಫೂರ್ತಿಗೊಂಡು ಹೇಳಿದ, 'ಸಹಜ ಚಲನೆ ಅಂದ್ರೆ ಸೆಕೆಂಡ್‌ಗೆ ಇಪ್ಪತ್ನಾಲ್ಕು ಫ್ರೇಮ್, ವೇಗದ ಚಲನೆ ಅಂದ್ರೆ ಫ್ರೇಂ ಕಮ್ಮಿ, ಓಟ ಜಾಸ್ತಿ.... ನಿಧಾನಕ್ಕೆ ಹೋಗುವಂತೆ ಮಾಡಲು ಫ್ರೇಂ ಹೆಚ್ಚಿಸಬೇಕಾಗುತ್ತೆ... ಗೊತ್ತಾಯ್ತ?' ಅಂದ. ಆಕೆ ಗೊತ್ತಾಗಲಿಲ್ಲ. ಎಂದು ಹೇಳಿದ್ದರೆ ಇನ್ನಷ್ಟು ಹೇಳಬಹುದಿತ್ತು. ನಾಯ್ಡು ಕುಡಿದಿದ್ದ. 'ಗೊತ್ತಾಯ್ತು. ಊಟದ ಫ್ರೇಮ್, ಕೈ ತೊಳದ ಫ್ರೇಂ...' ಅಂದು ನಕ್ಕಳು. ಅದು ವೇಗದ ಚಲನೆ. ನಾಯ್ಡು ತಾತ್ವಿಕವಾಗಿ ಹೇಳಿದ, 'ನನ್ನ ಇಡೀ ಬದುಕನ್ನು ಫಾಸ್ಟ್ ಮೂವಿಂಗ್ ಮಾಡಿದರೆ ಎರಡೇ ಎರಡು ಗಂಟೇಲಿ ನಾನು ಹುಟ್ಟಿದ್ದು, ಬೆಳೆದದ್ದು,

(ಪುಟ 16ಕ್ಕೆ)

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# 'ವಿನಾಯಕ' ದರ್ಶನ

ಕನ್ನಡದ ಕವಿಶ್ರೇಷ್ಠರಾದ ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು, ಡಾ. ವಿನಾಯಕ ಕೃಷ್ಣ ಗೋಕಾಕರ ವಿದ್ಯಾರ್ಥಿಯಾಗಿದ್ದರು ಎಂದರು ನಂಬುವುದು ಕಷ್ಟ ! ಆದರೆ ಅದು ನಿಜ.

ಈ ಸ್ವಾರಸ್ಯಕರ ಸಂಗತಿ ಘಟಿಸಿದ್ದು ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಒಂದು ಮಹತ್ವದ ವಿಷಯ. ಬೇಂದ್ರೆಯವರು 'ಮಾಸ್ತರ' ಎಂದೇ ಹೆಸರಾಗಿದ್ದರು. ಅದಕ್ಕೆ ಅನುಗುಣವಾಗಿ ಅನೇಕ ಶಾಲೆಗಳಲ್ಲಿ ಅವರು ಮಾಸ್ತರರೂ ಆಗಿದ್ದರು. ಆದರೆ ಅವರಿಗೆ ಆ ಮಾಸ್ತರಕಿ ಸೇರಿಬರಲಿಲ್ಲ ! ಕಾಲೇಜಿನಲ್ಲಿ ಪಾಠ ಹೇಳುವ 'ಪ್ರೊಫಸರ' ಆಗಬೇಕೆಂದು ಬಯಸಿದರು. ಆದರೆ ಅದಕ್ಕೆ ಬೇಕಾದ ಎಂ.ಎ. ಅರ್ಹತೆ ಅವರಲ್ಲಿರಲಿಲ್ಲ. ಅವರು ಬಿ.ಎ. ಮಾತ್ರ ಆಗಿದ್ದರು. ! ಬಿ.ಎ. ಪರೀಕ್ಷೆಯಲ್ಲಿಯೂ ಅವರು ಇಂಗ್ಲಿಷನ್ನು ಮುಖ್ಯ ವಿಷಯವನ್ನಾಗಿ. ಸಂಸ್ಕೃತವನ್ನು ಉಪ ವಿಷಯವನ್ನಾಗಿಯೂ ತೆಗೆದುಕೊಂಡಿದ್ದರು. ಇಂಥವರು ಕನ್ನಡ ಪ್ರಾಧ್ಯಾಪಕರಾಗುವುದಂತೂ ಸಾಧ್ಯವೇ ಇರಲಿಲ್ಲ ! ಆದ್ದರಿಂದ ಅವರು ಕನ್ನಡದಲ್ಲಿ ಎಂ.ಎ. ಮಾಡಲು ಬಯಸಿ ಪುಣೆಗೆ ಹೋದರು. ಅವರಿಗೆ ಶಿಕ್ಷಣ ಕೊಡುವುದು ವಿಶ್ವವಿದ್ಯಾನಿಲಯದ ಕರ್ತವ್ಯವೇ ಆಗಿತ್ತು.

ಆಗ ಪುಣೆಯ ಕಾಲೇಜುಗಳಲ್ಲಿ ಕನ್ನಡ ಕಲಿಸಲು ಯಾವೊಬ್ಬ ಅರ್ಹರಾದ ಶಿಕ್ಷಕರೂ ಇರಲಿಲ್ಲ. ವಿಶ್ವವಿದ್ಯಾನಿಲಯ ಕನ್ನಡದಲ್ಲಿ ಪಾಠ ಹೇಳಲು ಅರ್ಹರಾದವರನ್ನು ಶೋಧಿಸತೊಡಗಿತು. ಆಗ ಅದು ಗೋಕಾಕರ ಜೀವನ ವೃತ್ತವನ್ನೂ ಪರಿಶೀಲಿಸಿತು. ಗೋಕಾಕರು ಬಿ.ಎ. ಮತ್ತು ಎಂ.ಎ. ಗಳೆರಡರಲ್ಲಿಯೂ ಎರಡೆರಡು ಪೇಪರ್‌ಗಳನ್ನು ಕನ್ನಡ, ಅದರಲ್ಲಿಯೂ ಹಳೆಗನ್ನಡವನ್ನು ತೆಗೆದುಕೊಂಡಿದ್ದರು ! ಈ ವಿಷಯ ಬಹಳ ಜನರಿಗೆ ಗೊತ್ತಿಲ್ಲ. ಮುಂಬೈ ವಿಶ್ವವಿದ್ಯಾನಿಲಯ ಗೋಕಾಕರು ಕನ್ನಡ ಕಲಿಸಲು ಅರ್ಹ ವ್ಯಕ್ತಿ ಎಂದು ತೀರ್ಮಾನಿಸಿತು. ಬೇಂದ್ರೆಯವರಿಗೆ ಕನ್ನಡದ ವಿದ್ಯಾರ್ಥಿಯಾಗಿ ಬರಲು ಒಪ್ಪಿಗೆ ನೀಡಿತು. ಇದರ ಫಲ ಎಂದರೆ ಬೇಂದ್ರೆಯವರು ಗೋಕಾಕರ ವಿದ್ಯಾರ್ಥಿಯಾದದ್ದು ! ಬೇಂದ್ರೆ, ಗೋಕಾಕರ ಗುರುಗಳೆಂದು ಎಲ್ಲರೂ ಭಾವಿಸಿದ್ದರು. ಈಗ ಗೋಕಾಕರೇ ಗುರುಗಳಾದರು ! ಬೇಂದ್ರೆಯವರು ಶಿಷ್ಯರಾದರು. ಇಂಥ ಪರಿಸ್ಥಿತಿಯಲ್ಲಿ ನಿಮಗೆ ಹೇಗನ್ನಿಸುತ್ತಿತ್ತು ? ಎಂಬ ಪ್ರಶ್ನೆಗೆ ಗೋಕಾಕರು ಹೇಳುತ್ತಾರೆ.

'ಅದು ಕೇವಲ ಕಾಗದದಲ್ಲಿ ಮಾತ್ರ ಇತ್ತು. ಅದು ಅನಿವಾರ್ಯವಾಗಿತ್ತೆಂಬುದು ಬೇಂದ್ರೆ ಅವರಿಗೂ ಗೊತ್ತಿತ್ತು. ನಾವು ಕ್ಲಾಸ್ ರೂಮಿಗೆ ಹೋಗುವವರಿಗೆ ಟೀಚರ್-ಸ್ಟೂಡೆಂಟ್ ಆಗಿರುತ್ತಿದ್ದೆವು. ಕ್ಲಾಸು ಸೇರಿದಾಗ ಬೇಂದ್ರೆ ಕುರ್ಚಿಯ ಮೇಲೆ ಕೊಡುತ್ತಿದ್ದರು. ನಾನು ಡೆಸ್ಕಿನಲ್ಲಿ ಕೂಡುತ್ತಿದ್ದೆ. ಅವರೇ ಲೆಕ್ಚರ್ ಕೊಡುತ್ತಿದ್ದರು. ನಾನು ಅವರ ವಾಣಿಯನ್ನು ಕೇಳುತ್ತಿದ್ದೆ. ಇಟ್ ವಾಸ್ ಎ ಗ್ರೇಟ್ ಎಕ್ಸ್‌ಪೀರಿಯನ್ಸ್ ! ನಾವು ಸುನೀತ. ಅಷ್ಟ ಷಟ್ಪದಿ ಕನ್ನಡದಲ್ಲಿ ಬರೆದು ಅನೇಕ ಪ್ರಯೋಗ ಮಾಡಿದೆವು'

★ ★ ★

ಒಮ್ಮೆ ಮದ್ರಾಸಿಗೆ ಹೋಗಬೇಕಾಗಿದ್ದ ರೈಲು ಗುಂತಕಲ್ ಸ್ಟೇಷನ್ನಿನಲ್ಲಿ ನಿಂತಿತು. ಆಗ ಮೊದಲ ದರ್ಜೆಯ ಪ್ರಯಾಣಿಕರಾಗಿದ್ದ ಗೋಕಾಕರು 'ಚಾ' ತರುವ ಸಲುವಾಗಿ 'ಚಾ'ದಂಗಡಿಗೆ ಇಳಿದು ಹೋದರು. ಯಾವುದೋ ವಿಚಾರದಲ್ಲಿ ಮಗ್ನರಾಗಿದ್ದ ಅವರು 'ಚಾ'ದಂಗಡಿಯಿಂದ ಬರುವಷ್ಟರಲ್ಲಿಯೇ ರೈಲು ಹೊರಟು ಬಿಟ್ಟಿತು ! ತಮ್ಮ ಗಾಡಿಗೆ ಹೋಗಿ ಸೇರುವುದು ಗೋಕಾಕರಿಗೆ ಸಾಧ್ಯವಿರಲಿಲ್ಲ. ಗಾಡಿಯಲ್ಲಿ ಎಲ್ಲ ಸಾಮಾನು, ಬಟ್ಟೆ ಬರೆ ಹಣ ಕೂಡ ಇತ್ತು. ಮರುದಿನ ಮದ್ರಾಸಿನಲ್ಲಿ ಒಂದು ಮಹತ್ವದ ಮೀಟಿಂಗಿನಲ್ಲಿ ಹಾಜರಿರಬೇಕಾಗಿತು. ಗೋಕಾಕರಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ ! ಆಲೋಚಿಸುತ್ತ ನಿಂತು ಬಿಟ್ಟರು. ಅಷ್ಟರಲ್ಲಿಯೇ ಹೊರಟ ರೈಲು ನಿಂತದ್ದು ಕಾಣಿಸಿತು. ನಿಂತ ರೈಲು ಹಿಂದೆ ಹಿಂದಕ್ಕೆ ಬರಲಾರಂಭಿಸಿತು. ಗಾರ್ಡ್ ಬಂದು ಗೋಕಾಕರ ರಟ್ಟೆ ಹಿಡಿದು ಅವರ ಸ್ಥಾನಕ್ಕೆ ತಲುಪಿಸಿದ ಮುಂದಿನ ನಿಲ್ದಾಣದಲ್ಲಿ ಆ ಗಾರ್ಡ್ ಮತ್ತೆ ಬಂದು 'ತಮಗೆ ತೊಂದರೆಯಾಯ್ತು ಸರ್ ?' ಎಂದು ಕೇಳಿದ.

'ನೀವಿಲ್ಲದಿದ್ದರೆ ತೊಂದರೆಯಾಗ ಬಹುದಿತ್ತು. ನಿಮ್ಮಿಂದ ಅದು ತಪ್ಪಿತು. ಥ್ಯಾಂಕ್ ಯು' ಗೋಕಾಕರೆಂದರು.

ಗಾರ್ಡ್ ಮತ್ತೆ ಕೇಳಿದ್ದ 'ನನ್ನ ಪರಿಚಯ ಆಯ್ತೆ ಸರ್ ?'

ಗೋಕಾಕರು, 'ಇಲ್ಲ'ವೆಂದರು ತಲೆಯಾಡಿಸಿದರು. ಅವನು ಫೆರ್ನಾಂಡಿಸ್ ಬಿ.ಎ.ಗೆ ಇಂಗ್ಲಿಷನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡಿದ್ದ. ಗೋಕಾಕರ ಒಬ್ಬ ವಿದ್ಯಾರ್ಥಿ ! ವಾರ್ಷಿಕ ಪರೀಕ್ಷೆಯಲ್ಲಿ ಕಾಪಿ ಮಾಡುತ್ತಿದ್ದಾಗ ಸಿಕ್ಕಿ ಬಿದ್ದವನು ಮತ್ತು ಅದಕ್ಕಾಗಿ ಮೂರು ವರ್ಷ ಡಿಬಾರ್ ಆಗಿದ್ದವನು. ಅವನು ಹೇಳಿದ:



ಜಿ. ವಿ. ಕುಲಕರ್ಣಿ

'ಸರ್, ನಾನು ನಿಮ್ಮನ್ನು ಅನೇಕ ಸಲ ಭೇಟಿಯಾಗಿದ್ದೇನೆ. ನೀವು ನನ್ನನ್ನು ಎಷ್ಟೋ ಸಲ ಸಂಜೆ ವಾಕ್‌ನಲ್ಲಿ ಜೊತೆಗೆ ಕರೆದುಕೊಂಡು ಹೋದಿರಿ. ಜೀವನದ ಬಗ್ಗೆ ಮಾತನ್ನಾಡಿದಿರಿ. ಬುದ್ಧಿವಾದ ಹೇಳಿದಿರಿ. ನನಗೆ ಪಶ್ಚಾತ್ತಾಪವಾಗಿತ್ತು. ನನ್ನ ಶಿಕ್ಷೆಯನ್ನು ಒಂದು ವರ್ಷಕ್ಕೆ ಇಳಿಸುವಂತೆ ವಿಶ್ವವಿದ್ಯಾನಿಲಯಕ್ಕೆ ಶಿಫಾರಸ್ ಮಾಡಿದಿರಿ. ನಿಮ್ಮ ಫೋಟೋವನ್ನು ಯಾವಾಗಲೂ ನನ್ನ ಪರ್ಸಿನಲ್ಲಿಟ್ಟುಕೊಂಡಿರುವೆ. ಜೀವನದಲ್ಲಿ ನಿಮ್ಮಿಂದಲೇ ನಾನು ಸ್ಫೂರ್ತಿ ಪಡೆದಿದ್ದೇನೆ.' ಅವನು ಪರ್ಸಿನಿಂದ ಗೋಕಾಕರ ಚಿತ್ರ ತೆಗೆದು ತೋರಿಸಿದ!

'ಓ ! ನೀವು ಆ ವಿದ್ಯಾರ್ಥಿಯೆ ?' ಆಶ್ಚರ್ಯದಿಂದ ಗೋಕಾಕ್ ಉದ್ಗರಿಸಿದರು.

★ ★ ★

ಕನ್ನಡದ ಮಹಾನ್ ಲೇಖಕರಲ್ಲಿ ಒಬ್ಬರಾಗಿದ್ದ ಡಾ. ಗೋಕಾಕರು (ಜನನ: ಆಗಸ್ಟ್ 9, 1909; ಮರಣ: ಏಪ್ರಿಲ್ 28, 1992) ಬದುಕಿದ್ದಿದ್ದರೆ ತೊಂಬತ್ತು ವರ್ಷಗಳಾಗಿರುತ್ತಿತ್ತು. ಅವರ ಬದುಕಿನ ಅನೇಕ ಸ್ವಾರಸ್ಯಕರ ಘಟನೆಗಳನ್ನು ಒಳಗೊಂಡ. ಅವರ ಸಾಹಿತ್ಯ ಸಾಧನೆಯನ್ನು ವಿವರಿಸುವ, ಅವರ ಮಾನವೀಯ ಮುಖವನ್ನು ಪರಿಚಯಿಸುವ ಒಂದು ಪುಸ್ತಕ ಈಗ ಪ್ರಕಟ ಆಗಿದೆ. ('ನಾ ಕಂಡ ಗೋಕಾಕ: ಜೀವನ ಮತ್ತು ಸಾಹಿತ್ಯ'- ಡಾ. 'ಜೀವಿ' ಕುಲಕರ್ಣಿ ಹರ್ಷವರ್ಧನ ಪ್ರಕಾಶನ, ಮುಂಬಯಿ; ಪುಟಗಳು 312; ಬೆಲೆ: ನೂರೈವತ್ತು ರೂಪಾಯಿ; ಆಗಸ್ಟ್ 1999). ಕನ್ನಡಕ್ಕೆ ಇದೊಂದು ಹೊಸ ಬಗೆಯ ಪುಸ್ತಕ. ಆದರೆ 'ಜೀವಿ' ಅವರಿಗಲ್ಲ ! ಅವರು ಈ ಮೊದಲೇ ಬೇಂದ್ರೆಯವರನ್ನು ಕುರಿತು ಇಂಥದೇ ಪುಸ್ತಕ ರಚಿಸಿದ್ದಾರೆ. ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆಯುವವರಿಗೆ ಇವೆರಡೂ ಅಪೂರ್ವವಾದ ಆಕರ ಗ್ರಂಥಗಳೆಂದರೆ ಅತಿ ಶಯೋಕ್ತಿ ಆಗಲಾರದು.

ಈ ಪುಸ್ತಕದ ಬಗೆಗೆ ಹೇಳಬೇಕಾದ

ಮತ್ತೊಂದು ಮಾತಿದೆ. ಅದು ಅದರ ಉತ್ಪಾದನೆಯನ್ನು ಕುರಿತು ! ಇದು ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳಲ್ಲಿ ಅತ್ಯಂತ ಆಕರ್ಷಕವಾಗಿದೆ. ಸೊಗಸಾಗಿದೆ. ಇದು ಯಾವ ಲೇಖಕನಿಗಾದರೂ ಹೆಮ್ಮೆಯನ್ನುಂಟು ಮಾಡುವಂಥದು. ಇದರಲ್ಲಿ ಹತ್ತಾರು ಪುಟಗಳ ಒಂದು ಚಿತ್ರ ಸಂಚಯವಿದೆ. ಗೋಕಾಕರ ಜೀವನಕ್ಕೆ ಸಂಬಂಧಪಟ್ಟಂತೆ ಅನೇಕ ಅಪೂರ್ವ ಚಿತ್ರಗಳು ಇಲ್ಲಿ ಸೇರಿವೆ. ಅಲ್ಲದೆ ಗೋಕಾಕರ ಅನನ್ಯ ಭಂಗಿಯ ಹಲವಾರು ರೇಖಾ ಚಿತ್ರಗಳೂ ಪುಸ್ತಕದ ಉದ್ದಕ್ಕೂ ಬಂದಿವೆ. ಪ್ರತಿ ಪುಟದಲ್ಲಿಯೂ ಅವರ ಕಿರು ಚಿತ್ರ ಸೇರಿದೆ ! ಪುಸ್ತಕದ ಉತ್ಪಾದನೆಯಲ್ಲಿ ಲೇಖಕರು ವಹಿಸಿದ ಆಸಕ್ತಿ ವಿಶೇಷವಾದದ್ದು, ಮೆಚ್ಚಬೇಕಾದದ್ದು.

'ಜೀವಿ' ಕುಲಕರ್ಣಿ ಕನ್ನಡದ ಸಾಹಿತ್ಯದಲ್ಲಿ ಒಬ್ಬ ವರ್ಣರಂಜಿತ ವ್ಯಕ್ತಿ. ಆರು ಕವನ ಸಂಗ್ರಹಗಳೂ- ಇವುಗಳಲ್ಲಿ ಒಂದು ಇಂಗ್ಲಿಷಿನಲ್ಲಿದೆ - ಸೇರಿದಂತೆ ಸುಮಾರು ಸುಮಾರು ಹದಿನೈದರಷ್ಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪುಸ್ತಕ ಪ್ರಕಟಣೆಯಲ್ಲಿ ಇವರು ವಿ.ಸೀ. ಸಂಪ್ರದಾಯದವರು. 1959ರಲ್ಲಿ ಪ್ರಕಟಗೊಂಡ ತಮ್ಮ 'ಮಧು ಸಂಚಯ'ಕವನ ಸಂಗ್ರಹದಿಂದ ಕನ್ನಡಕ್ಕೆ ಕಾಲಿಟ್ಟ 'ಜೀವಿ'ಯವರು, 'ಗೋಕಾಕರ ಬರಹದ ಮೇಲೆ ಶ್ರೀ ಅರವಿಂದೋ ಅವರ ಪ್ರಭಾವ' ಎಂಬ ವಿಷಯವಾಗಿ ಪ್ರಬಂಧ ರಚಿಸಿ, ಇಂಗ್ಲಿಷಿನಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಗೋಕಾಕರ ಅತ್ಯಂತ ನಿಕಟವರ್ತಿಗಳಲ್ಲಿ ಇವರೂ ಒಬ್ಬರು. ಆದ್ದರಿಂದಲೇ ಅವರು 'ನಾ ಕಂಡ ಗೋಕಾಕ' ಪುಸ್ತಕ ರಚಿಸಲು ಸಂಪೂರ್ಣವಾಗಿ ಅರ್ಹರಾಗಿದ್ದಾರೆ. ಅವರು ಗೋಕಾಕರ ಬಗ್ಗೆ ಮುಂಬಯಿಯ 'ಕರ್ನಾಟಕ ಮಲ್ಲ' ಪತ್ರಿಕೆಯಲ್ಲಿ 66 ಲೇಖನಗಳನ್ನು ಪ್ರಕಟಿಸಿದರು. ಆ ಲೇಖನಗಳನ್ನು ಪರಿಷ್ಕರಿಸಿ ಈ ಪುಸ್ತಕವನ್ನು ತಂದಿದ್ದಾರೆ. ಗೋಕಾಕರ ಬಗೆಗೆ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಅವುಗಳಲ್ಲೆಲ್ಲ ಇದು ವಿಶಿಷ್ಟವಾಗಿ ಇದೆ. ಈ ವಿಶಿಷ್ಟತೆಗೆ ಕಾರಣವೆಂದರೆ ಗೋಕಾಕರೊಡನೆ 'ಜೀವಿ' ಪಡೆದಿದ್ದ ಆತ್ಮೀಯ ಸಂಬಂಧವೆಂದೇ ಹೇಳಬೇಕು. ಈ ಸಂಬಂಧ ಈ ಪುಸ್ತಕದಲ್ಲಿ ಮಾಗಿ ಹಣ್ಣಾಗಿದೆ, ಮಧುರ ಫಲವಾಗಿದೆ !

'ನಾ ಕಂಡ ಗೋಕಾಕ' ಪುಸ್ತಕದಲ್ಲಿ 51 ಚಿಕ್ಕ ಚಿಕ್ಕ ಅಧ್ಯಾಯಗಳಿವೆ. ಇದಕ್ಕೆ ಅಪವಾದವೆಂದರೆ 'ಗೋಕಾಕರ ಇಂದಿಲ್ಲ ನಾಳೆ' ಮತ್ತು 'ವಿನಾಯಕರ ಮಹಾಕಾವ್ಯ ಭಾರತ ಸಿಂಧು ರಶ್ಮಿ' ಎಂಬ ಎರಡು ಅಧ್ಯಾಯಗಳು. ಇವೆರಡು ದೀರ್ಘ ಅಧ್ಯಾಯಗಳು. ಇವೆರಡು ದೀರ್ಘ ಅಧ್ಯಾಯಗಳಲ್ಲಿ 'ಇಂದಿಲ್ಲ ನಾಳೆ'ಯನ್ನು ಕುರಿತ ಅಧ್ಯಾಯ ಅನಾವಶ್ಯಕವಾಗಿ ಬೆಳೆದಂತೆ ತೋರುತ್ತದೆ ! ಗೋಕಾಕರ ಜೀವನದ ಮಹತ್ವದ ಸಂದರ್ಭಗಳನ್ನು 'ಜೀವಿ' ಇಲ್ಲಿ ತುಂಬ ಸ್ವಾರಸ್ಯವಾಗಿ, ರೋಚಕವಾಗಿ ಸೆರೆ ಹಿಡಿದಿದ್ದಾರೆ. ಈ ಪುಸ್ತಕದ ಒಂದು ಸ್ವಾರಸ್ಯವೆಂದರೆ ಪ್ರತಿಯೊಂದು ಪುಟದಲ್ಲಿಯೂ ಹೊರ ಹೊಮ್ಮುವ ಆತ್ಮೀಯತೆ, ಗಾಢವಾದ ಪ್ರೀತಿ. ಗೋಕಾಕರ ಸಮೀಪ ಬಂದವರಿಗೆಲ್ಲ ಅವರನ್ನು ಪ್ರೀತಿಸದಿರುವುದು ಸಾಧ್ಯವಿಲ್ಲ. ಒಂದೊಂದು ಸಲ ಈ ಪ್ರೀತಿಯ ಉತ್ಸಾಹದಲ್ಲಿ ತಾನೇನು ಮಾಡುತ್ತಿದ್ದೇನೆಂದು ತಿಳಿಯದೆ ಅವರು ವರ್ತಿಸುತ್ತಿದ್ದರು.

ಅವರಿಗೆ ಜ್ಞಾನಪೀಠ ಪ್ರಶಸ್ತಿ ಪ್ರದಾನವಾದ ಸಂದರ್ಭದಲ್ಲಿ ನಾನು ಕರ್ನಾಟಕ ಸರಕಾರದ ಪರವಾಗಿ ಮುಂಬಯಿಯಿಗೆ ಹೋಗಿದ್ದೆ. ಇದು ಗೋಕಕ ಅವರಿಗೆ ತುಂಬ ಸಂತೋಷವನ್ನು ತಂದಿತ್ತು. ನಾನು ಅವರ ಮನೆಯಲ್ಲಿಯೇ ಉಳಿದುಕೊಂಡಿದ್ದೆ. ನಾನು ಮೈಸೂರಿಗೆ ಹಿಂದಿರುಗುವ ಮೊದಲು ಅವರು ನನ್ನನ್ನು ತಮ್ಮ ಕೋಣೆಗೆ ಕರೆದರು. ಒಂದು ದೊಡ್ಡ ಮೊತ್ತಕ್ಕೆ ಬರೆದಿದ್ದ ಚೆಕ್ ಒಂದನ್ನು ಕೊಟ್ಟು, 'ತೆಗೆದುಕೊಳ್ಳಿ' ಎಂದರು. 'ಇದೇನು ?' ನಾನು ಕೇಳಿದೆ. 'ಅಷ್ಟೊಂದು ದುಡ್ಡು ಖರ್ಚು ಮಾಡಿಕೊಂಡು ಬಂದಿದ್ದೀರಿ. ಅದರ ಒಂದು ಭಾಗ ಅಷ್ಟನ್ನೇ ಕೊಡುತ್ತಿದ್ದೇನೆ. ಪೂರ್ತಿಯಾಗಿ ಕೊಡಲು ಆಗಲಿಲ್ಲ. ಕ್ಷಮಿಸಿ' ಎಂದು ಅವರು ವಿಷಾದದಿಂದ ಹೇಳಿದರು. ಆ ಕ್ಷಣದಲ್ಲಿ ನನಗೆ ಕಣ್ಣೀರು ಬಂತು! 'ನಾನು ಕರ್ನಾಟಕ ಸರಕಾರದ ಅಧಿಕೃತ ಪ್ರತಿನಿಧಿಯಾಗಿ ಬಂದಿದ್ದೇನೆ. ನನ್ನ ಖರ್ಚು ವೆಚ್ಚವನ್ನೆಲ್ಲ ಸರಕಾರವೇ ಭರಿಸುತ್ತದೆ' ಎಂದು ಅವರ ಚೆಕ್ಕನ್ನು ಹಿಂದಕ್ಕೆ ಕೊಡುವಷ್ಟರಲ್ಲಿ ನನಗೆ ಸಾಕು ಸಾಕಾಗಿ ಹೋಯಿತು. ಇಂಥ ಅನುಭವ ಆ ಮೊದಲೂ ಒಂದೆರಡು ಸಾರಿ ನನಗಾಗಿತು. ಇದು ಗೋಕಾಕರ ಅಂತಃಕರಣ. ಇಂಥ ಅಂತಃಕರಣದ ಅನೇಕ ಸಂದರ್ಭಗಳನ್ನು ಪ್ರಸ್ತುತ ಪುಸ್ತಕದಲ್ಲಿ ಓದಬಹುದು !

ಗೋಕಾಕರನ್ನು ಕುರಿತು ಬೇರೆ ಕಡೆ ಎಲ್ಲಿಯೂ ಸಿಗದ ಅನೇಕ ಮಾಹಿತಿಗಳು ಇಲ್ಲಿ ದೊರೆಯುತ್ತವೆ. ಅವುಗಳಿಂದ ನಾವು ತಿಳಿದ ಗೋಕಾಕರ ವ್ಯಕ್ತಿತ್ವ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. ಅವರ ಕೃತಿಗಳನ್ನು ನೋಡಲು ಹೊಸ ಬಾಗಿಲುಗಳು ತೆರೆದುಕೊಳ್ಳುತ್ತವೆ. 'ಜೀವಿ'ಯವರ ಹತ್ತು ಹಲವು ಒಳನೋಟಗಳು ಈ ಪುಸ್ತಕದ ಉದ್ದಕ್ಕೂ ಕಾಣಸಿಕೊಳ್ಳುತ್ತವೆ. ಈ ಬರವಣಿಗೆ ಅಂತಃಕರಣದ ಬರವಣಿಗೆ. ಗೋಕಾಕರನ್ನು ಬಲ್ಲವರಿಗೆ ಅವರ ಪ್ರೀತಿ ಹೆಚ್ಚುತ್ತದೆ. ಅವರನ್ನು ತಿಳಿಯದವರಿಗೆ ಅವರ ಬಗ್ಗೆ ಪ್ರೀತಿ ಉಕ್ಕುತ್ತದೆ. ಈ ಬಗೆಯ ಪುಸ್ತಕಗಳು ನಮ್ಮ ಕನ್ನಡನದಲ್ಲಿ ತುಂಬ ವಿರಳ. 'ಜೀವಿ'ಯವರೇ ಇನ್ನೊಂದು ಪುಸ್ತಕ, ಬೇಂದ್ರೆಯವರನ್ನು ಕುರಿತದ್ದು ಮಾತ್ರ ನೆನಪಿಗೆ ಬರುತ್ತದೆ. ಅದೇ ಜೀ.ವಿ.ಯವರ ಹಿರಿಮೆ; ಅವರ ಪುಸ್ತಕದ ಸೊಗಸು.

'ನಾ ಕಂಡ ಗೋಕಾಕ' ಒಂದು ಸೊಗಸಾದ ಪುಸ್ತಕ. ಇಂಥ ಪುಸ್ತಕವನ್ನು ನಾನು ಕನ್ನಡದಲ್ಲಿ ಓದಿದ್ದೇ ಅಪರೂಪ. ಗೋಕಾಕರ ತೊಂಬತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಈ ಪುಸ್ತಕ ಪ್ರಕಟವಾದದ್ದು ಉಚಿತವಾಗಿದೆ. ಬೇಂದ್ರೆಯವರನ್ನು ಕುರಿತ ಈ ಅವರ ಪುಸ್ತಕದ ಬಗ್ಗೆ ತಾನು 'ಜೀವಿ'ಯವರಿಗೆ ಬರೆದಿದ್ದೆ: 'ಒಬ್ಬ ಶಿಷ್ಯ ತನ್ನ ಗುರುವಿಗೆ ಇದಕ್ಕಿಂತ ಉತ್ತಮ ಕಾಣಿಕೆ ಕೊಡಲಾರ.' ಈಗ ಮತ್ತೊಮ್ಮೆ ಅದೇ ಮಾತನ್ನು ಹೇಳಬೇಕಾಗಿದೆ. ಇಂಥದೊಂದು ಪುಸ್ತಕ ಬರೆದ 'ಜೀವಿ'ಯವರೂ. ಬರೆಸಿಕೊಂಡ ವಿನಾಯಕರೂ ಧನ್ಯರು !

*(ಅಕ್ಟೋಬರ್ 28. 1999ರ ಸುಧಾದಲ್ಲಿ ಪ್ರಕಟವಾದ ಹಾ.ಮಾ. ನಾಯಕರ ಅಂಕಣದ ಪುನ ಮುದ್ರಣ)*

## PROGRAMMES FOR MARCH 2000

### At Association's Auditorium

| | |
|---|---|
| March 19, 2000<br>6.30 p.m. | Bharat Natyam Recital<br>by<br>Ms. Meghna Doreswamy,<br>Ms. Auzar Irani,<br>Ms. Puneetha Khanna<br>Ms. S. Vaishnavi<br>Music by Smt. Usha Srinivas & Party |
| March 28, 2000<br>7.00 p.m. | Karnatic Classical Music<br>by<br>AIR Artist<br>Smt. Meera Nathan – Vocal<br>Smt. Lalitha Arun – Veena<br>Smt. Alamdu Mani – Vocal |

# ಕನ್ನಡದಲ್ಲಿ ಗದ್ಯ ಸಾಹಿತ್ಯ

ವಾಸುದೇವ ಕಾಣೆಮಾರು

ಹಿಂದೆ ಗ್ರಾಂಥಿಕ ಭಾಷೆಯು ಪದ್ಯಪ್ರಾಕಾರದ್ದಾಗಿದ್ದರೂ ಪಂಪನ ಕಾಲದಿಂದ ಅಂದರೆ ಒಂದು ಸಾವಿರ ವರ್ಷಗಳ ಹಿಂದೆ, ಕಾವ್ಯಗಳಲ್ಲಿ ಪದ್ಯದೊಡನೆ ಒಂದು ಪ್ರಕಾರದ ಗದ್ಯವನ್ನೂ ಸೇರಿಸಿಕೊಂಡು (ಅದಕ್ಕಾಗ ಚಂಪೂ ಕಾವ್ಯವೆನ್ನುತ್ತಿದ್ದುದುಂಟು) ಅವ್ಯವಹಾರಿಕವಾದರೂ ಗ್ರಂಥಕ್ಕೆ ಹೇಳಿ ಮಾಡಿಸಿದ ಗಂಭೀರ ಗದ್ಯ ಶೈಲಿಯೊಂದನ್ನು ಬಳಸುತ್ತಿದ್ದರು. ಮತ್ತೆ ಹರಿಹರನ ರಗಳೆಗಳು ಬಂದ ಮೇಲೆಯೇ 'ಗದ್ಯ ಹೃದ್ಯ' ಎಂಬ ಭಾವನೆಯು ಬಂದಿತೆಂದು ಕಾಣುತ್ತದೆ. ಬಸವಣ್ಣ ಮತ್ತು ಅವನ ಶೈವಕೂಟದವರು ವ್ಯಾವಹಾರಿಕ ಗದ್ಯ ವಚನಗಳನ್ನು ಬಳಸಿಕೊಂಡರು. ಆದರೂ ಸೂತ್ರರೂಪದಿಂದ ಸಂಸ್ಕರಿಸಿದ ಪದ್ಯದ ನುಡಿಗಳಿಗೇ ಪ್ರಾಶಸ್ತ್ಯವಿದ್ದಿತೆಂದು ಹರಿದಾಸರ ಪದ್ಯಗಳಲ್ಲೂ ನೋಡಬಹುದಾಗಿದೆ. ಮೈಸೂರೊಡೆಯರ ಕಾಲದ ಸಾಹಿತಿಗಳು, ಚಿಕುಪಾಧ್ಯಾಯರಂತಹವರು ಪೂರಾ ಗದ್ಯದ ಗ್ರಂಥವನ್ನೇ ಬರೆದದ್ದುಂಟಾದರೂ ಗ್ರಾಂಥಿಕ ಬಿಗುಮಾನವು ಅವುಗಳಿಗೆ ಅಂಟಿಕೊಂಡಿದ್ದ ಕಾರಣ ಸಾಮಾನ್ಯ ಜನರ ಆಡು ಭಾಷೆಗೆ ಅವುಗಳು ದೂರವಾಗೇ ಇದ್ದವು. ೧೯ನೇ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳು ಕನ್ನಡ ಮತ್ತು ಇಂಗ್ಲಿಷ್ ಶಬ್ದಕೋಶಗಳನ್ನು ಹತ್ತಿರವಿಟ್ಟು ಇಂಗ್ಲಿಷ್ ಗದ್ಯ ಸಾಹಿತ್ಯದ ಅನುಕರಣೆಯನ್ನು ಕನ್ನಡದಲ್ಲಿ ಮಾಡಿ ಹೊಸ ಯುಗ ಆರಂಭಿಸಿದಾಗ ಕೆಲವು ಪ್ರಬಂಧ ರಚನೆಗಳು, ಸಣ್ಣ ಕತೆ ಕಾದಂಬರಿಗಳೂ ನಾಟಕಗಳೂ ಪ್ರಚಾರವಾದ ಮೇಲೆಯೇ ಕನ್ನಡದ ವಿದ್ವಾಂಸರೂ ಹೊಸ ಪ್ರಕಾರದ ವೈಚಾರಿಕ ಗದ್ಯ ಸಾಹಿತ್ಯ ರಚನೆಗೆ ತೊಡಗಿದರು. ಅದಾಗಲೇ ಮಾರ್ಪಾಟಾದ ಹೊಸಗನ್ನಡ ಸಾಹಿತ್ಯದಲ್ಲಿ ಪದ್ಯಕ್ಕಿಂತಲೂ ಹೆಚ್ಚಿಗೆ ಗದ್ಯಕ್ಕೇ ಪ್ರಾಶಸ್ತ್ಯವು ಬಂತು. ಶಾಲಾ ಶಿಕ್ಷಣದಲ್ಲೂ ಪತ್ರಿಕೆ, ಗ್ರಂಥ' ಮತ್ತು ಬಳಕೆಗಳಲ್ಲೂ ಗದ್ಯ ತೊಡಗಿತೆನ್ನಬಹುದು. ಹಾಗೆ ನೋಡಿದರೆ ಎಲ್ಲೆಲ್ಲೂ ನಾಟಕ, ಕಾದಂಬರಿ, ಲಾಕ್ಷಣಿಕ ಗ್ರಂಥ ವಿಚಾರ, ವ್ಯಕ್ತಿ ಚಿತ್ರ ಇತ್ಯಾದಿಗಳಿಗಿಂತ, ಗದ್ಯವೇ ಇಂದಿಗೆ ಪ್ರಧಾನವಾಗಿರುತ್ತದೆ.

ಹೊಸಗನ್ನಡ ಗದ್ಯದಲ್ಲಿ ಲಲಿತ ವಾಙ್ಮಯ (ಒಳ್ಳೆಯ ಮಾತುಗಾರಿಕೆ ಮತ್ತು ಹಗುರಾದ ಹರಟೆ) ವೈಜ್ಞಾನಿಕ ರೀತ್ಯಾ ವಿವೇಚನೆಯ ಘನ ಉಪನ್ಯಾಸ ಮತ್ತು ಶಾಸ್ತ್ರಕ್ಕೆ ಸಂಬಂಧಿತ ಬರವಣಿಗೆ ಎಂದು ಮೂರು ರೀತಿಯವುಗಳು ಇವೆ. ಕೆಲವರು ಜನಪದ ಗದ್ಯ ಸಾಹಿತ್ಯ (ಇದು ಪದ್ಯ ಸಾಹಿತ್ಯಕ್ಕಿಂತ ಕಡಿಮೆ) ಶಿಶು ಸಾಹಿತ್ಯ (ಇದು ಶಿಶುಗಳಿಗೆ ಶೈಕ್ಷಣಿಕವಾಗಿರುವಂತಹದ್ದು) ಪತ್ರಿಕಾ ಸಾಹಿತ್ಯ (ಮಾಹಿತಿ ಮತ್ತು ಮನೋರಂಜನ ಒದಗಿಸುವ ಉದ್ದೇಶದವು) ಸಾಹಿತ್ಯ ವಿಮರ್ಶೆ, ಪತ್ರ ಲೇಖನ ಇತ್ಯಾದಿ ಹತ್ತು ಹಲವು ಬಗೆಗಳನ್ನು ಸೇರಿಸಿರುವರು. ಧಾರ್ಮಿಕ ಸಾಹಿತ್ಯದ ಗಾಂಭೀರ್ಯವೇ ಬೇರೆ, ರಾಜಕೀಯ ಪರವಾದ ಅಥವಾ ಲೌಕಿಕ ಪರವಾದ ಸಾಹಿತ್ಯದ ಬಗೆಯೇ ಬೇರೆ. ಚಿಕ್ಕ ಸುಭಾಷಿತಗಳು. ನಗೆನುಡಿಗಳು ಇವುಗಳನ್ನು ಚಿಂತನ ಪರವಾದ ಸುದೀರ್ಘ ಪ್ರಕಾರದ ಗದ್ಯಕ್ಕೆ ಹೋಲಿಸುವ ಹಾಗಿಲ್ಲ. ಕನ್ನಡದಲ್ಲಿಯ ಭಾಷಾ ಶಾಸ್ತ್ರವಾಗಲಿ, ಸಾಮಾಜಿಕ ಚಿಂತನವಾಗಲಿ, ಒಟ್ಟಿನಲ್ಲಿ ಜ್ಞಾನದಾಯಕ ಸಾಹಿತ್ಯವೆಲ್ಲ ಗದ್ಯದಲ್ಲೇ ಬಳಕೆಯಾಗಿವೆ. (ಹಿಂದೆ ಪ್ರತಿಯೊಂದಕ್ಕೂ ಸೂತ್ರರೂಪದ ಪದ್ಯವೇ ಮಾಧ್ಯಮವಾಗಿತ್ತೆಂಬುದನ್ನು ಮರೆಯಬಾರದು.)

ಲಲಿತ ಸಾಹಿತ್ಯದಲ್ಲಿ ಕಲ್ಪನಾ ಸಾಹಿತ್ಯಕ್ಕೆ (Fiction) ಹೆಚ್ಚಿಗೆ ಬೆಲೆ. ಬಿ. ವೆಂಕಟಾಚಾರ್ಯರು ವಂಗ ಸಾಹಿತ್ಯ ಅನುವಾದ ಮಾಡುತ್ತ, ಗಳಗನಾಥರು ಸ್ವಲ್ಪ ಮಟ್ಟಿಗೆ ಮರಾಠಿ ಗದ್ಯ ಸಾಹಿತಿಗಳನ್ನು ಅನುಕರಿಸುತ್ತ, ಮೊದಲಿಗೆ ಕನ್ನಡ ವಚನದ ಕಾದಂಬರಿಗಳನ್ನೂ ತಂದುದುಂಟು. ಈ ಶತಮಾನದ ಆರಂಭದಲ್ಲಿ. ಗಳಗನಾಥರು ಉತ್ತರ ಕರ್ನಾಟಕದ ಬಳಕೆಯ ಭಾಷೆಯನ್ನು ಹಿಂದೆ ಮುಂದೆ ನೋಡದ ಬಳಸಿಕೊಂಡಾಗ ಅವರ ಶೈಲಿಯಲ್ಲಿ ಕೆಲವೊಮ್ಮೆ ವ್ಯಾಕರಣದ ಬಿಗಿ ಕಟ್ಟು ಬಿಟ್ಟು ಹೋಗಿದೆ. ಆದರೆ. ಅನಂತರ ಬಂದ ಕೆರೂರು ವಾಸುದೇವಾಚಾರ್ಯರಲ್ಲಿ ಭಾಷೆಯು ಹೆಚ್ಚು ನಯಗೊಂಡು, ಹದಗೊಂಡು, ಕನ್ನಡದ ಪಡೆ ನುಡಿಯ (Iciom) ಬೆಡಗನ್ನು ಕೂಡಿಕೊಂಡು ಮಾದರಿಯಾಗಿದೆ. ಈ ಸಮಕಾಲದಲ್ಲಿ ಬೆಂಗಳೂರಿನ ಕಡೆ ಪುಟ್ಟಣ್ಣನವರು ಬಳಕೆಯ ರೀತಿಯನ್ನು ಅಳವಡಿಸಿಕೊಂಡರೆ, ಚ. ವಾಸುದೇವಣ್ಣನವರು ಅಲ್ಲಿ, ಮತ್ತು ಮಂಗಳೂರಿನಲ್ಲಿ ಪಂಜೆಯವರು, ಎಂ.ಎನ್. ಕಾಮತರು ಮುಂತಾದವರ ಬರವಣಿಗೆ ಬಗೆ ಬಗೆಯ ಸಾಹಿತ್ಯ ಕಾರ್ಯಕ್ಕೆ ಒದಗಿ ಕಳೆಗೊಂಡ ಗದ್ಯವೆಲ್ಲ ಕಡೆ ನಿರ್ಮಾಣವಾಯಿತು. ಕೆ.ವಿ. ಪುಟ್ಟಪ್ಪನವರ ಶೈಲಿಯಲ್ಲಿ ಮಲೆನಾಡಿನ ಛಾಯೆ ಗದ್ಯದಲ್ಲಿ ಹರಿದರೆ, ಶಿವರಾಮ ಕಾರಂತರ ಶೈಲಿಯಲ್ಲಿ ಕರಾವಳಿ ಕನ್ನಡವು ತಿಳಿಯಾಗಿ, ರೂಪಕ-ಶ್ಲೇಷೆಗಳ ಗೊಂದಲವಿಲ್ಲದೆ, ಅತಿಶಯೋಕ್ತಿ-ಉತ್ಪ್ರೇಕ್ಷೆಗಳ ಆಡಂಬರವಿಲ್ಲದೆ, ಶಕ್ತಿಯುಳ್ಳ ಸ್ವಪ್ನೋಕ್ತಿಯಲ್ಲಿ ಮುನ್ನಡೆದಿದೆ.

ಕನ್ನಡ ಗದ್ಯಕ್ಕೆ ಮೈಸೂರು ವಿಶ್ವ ವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆ ಮತ್ತು ಧಾರವಾಡದ ಸಾಹಿತ್ಯ ಸಂಘದವರ ಕೊಡುಗೆ ಮಹತ್ತರವಾದುದು. ಹಿಂದೆ ಶಿಕ್ಷಣ ಶಾಸ್ತ್ರ, ಮಾನಸ ಶಾಸ್ತ್ರ, ಸಮಾಜ ಶಾಸ್ತ್ರ, ಅರ್ಥ ಶಾಸ್ತ್ರಗಳ ಕುರಿತು ಗ್ರಂಥಗಳಾಗಿದ್ದರೆ, ಇಂದಿಗೆ ನ್ಯಾಯಾಂಗ, ವ್ಯವಹಾರಾಂಗ, ಭೌತ ವಿಜ್ಞಾನಾಂಗ, ವೈದ್ಯಕೀಯ, ಯಂತ್ರಶಾಸ್ತ್ರ, ಗಣಿತ- ಹೀಗೆ ಎಲ್ಲಾ ವಿಭಾಗಗಳಲ್ಲೂ ಕನ್ನಡದ ಗದ್ಯ ಸಾಹಿತ್ಯ ನಿಧಾನವಾಗಿ ಬೆಳೆದಿರುವುದನ್ನು ಕಾಣಬಹುದು. ಆದರೆ ಇಂದಿಗೂ ಇಂಗ್ಲಿಷಿನಲ್ಲಿ ಬರೆದ ಗದ್ಯ ಸಾಹಿತ್ಯಕ್ಕೇ ಸುಶಿಕ್ಷಿತರು ಹೆಚ್ಚಿಗೆ ಬೆಲೆ ತರುತ್ತಾರಲ್ಲದೆ ಸುಲಭ ಲಭ್ಯವಾದರೂ ಸ್ವಲ್ಪ ವಿಕೃತ ವಿಧಾನದಿಂದ ಬರೆಯಲ್ಪಟ್ಟ ಕನ್ನಡ ಗದ್ಯಕ್ಕಲ್ಲ. ಕನ್ನಡವೆಂದರೇ ಕನ್ನಡ ಗದ್ಯಕ್ಕೆ ವಿಶೇಷವಾದ ಪ್ರಚಾರ ಮತ್ತು ಧನ ಸಹಾಯ ಬೇಕಿರುತ್ತದೆ. ಸ್ವಲ್ಪ ಕಲಿತವರೆಲ್ಲ ಗದ್ಯ ಪ್ರಕಾರದಲ್ಲಿ ಬರೆಯಲು ಕೈಯಾಡಿಸದೆ ಬರೆದು ಪಳಗಿದ ವಿದ್ವಾಂಸರೇ ಗದ್ಯ ರಚನೆಗೆ ಕೈ ಹಾಕಬೇಕಾದುದು ಕನ್ನಡದಲ್ಲಿ ಉತ್ತಮ ಗದ್ಯ ಕಾಣಿಸಿಕೊಳ್ಳಬೇಕಾದರೆ ಅವಶ್ಯವೆನಿಸಿದೆ.

ಗದ್ಯ ಸಾಹಿತ್ಯದಲ್ಲಿ ಅನುವಾದ ಸಾಹಿತ್ಯವೆಂಬ ಪ್ರಕಾರದಲ್ಲೂ ಕನ್ನಡಿಗರು ಕೈಯಾಡಿಸಬೇಕಿದೆ. ಬೇರೆ ಭಾಷೆಗಳಲ್ಲಿ ಕಾಣಿಸಿಕೊಳ್ಳುವ ಉತ್ತಮ ಪ್ರಬಂಧ ನಿಬಂಧನೆಗಳನ್ನು ಕನ್ನಡಕ್ಕೆ ಶಬ್ದಶಃ ಭಾಷಾಂತರ ಮಾಡುವ ಪ್ರಯಾಸದಲ್ಲಿ ಓದುವವರಿಗೆ ಭಾಷೆಯು ಕನ್ನಡವೇ ಎಂಬಂತೆ ಸಲೀಸಾಗಿ ಓದಲಾಗುವಂತೆ, ಕೃತಕತೆ ಹೊಳೆಯದಂತೆ ಕನ್ನಡದಲ್ಲಿ ಅನುವಾದವಾಗಬೇಕಾದರೆ ಉತ್ತಮ ಭಾಷಾ ಪ್ರಾವೀಣ್ಯರೇ ಆ ಕೆಲಸ ಮಾಡಬಲ್ಲರು. ಭಾವಾನುವಾದವೆಂದು ಏನೇನೋ ಬರೆದು ಕೊಟ್ಟರೆ ಅದು ಕೃತಿ ಚೌರ್ಯದಷ್ಟೇ ಕೆಟ್ಟ ಕೆಲಸ. ಎಲ್ಲಕ್ಕೂ ಮುಖ್ಯವಾಗಿ ಕನ್ನಡ ಭಾಷೆಯಿಂದ ಇತರ ಭಾಷೆಗಳಿಗೆ ಉತ್ತಮ ಅನುವಾದಗಳಾಗಿ ಹೋಗಬೇಕು. ಇದರಿಂದ ಪ್ರಬುದ್ಧವಾದ ಕನ್ನಡ ಭಾಷೆಗೆ ಗೌರವ ಮಾತ್ರವಲ್ಲ ಹಿರಿಮೆಯೂ ತನ್ನಿಂದ ತಾನೇ ಸಿಗಬಹುದು. ಹಿಂದೀ ಸಾಹಿತ್ಯಾನುವಾದದಲ್ಲಿ ಶ್ರೀ ಗುರುನಾಥ ಜೋಶಿಯವರು, ಹಾಗೆ ನೋಡಿದರೆ ಒಳ್ಳೆಯ ಕೆಲಸ ಮಾಡಿರುತ್ತಾರೆ.

ಪಂಜೆ, ಪಡುಕೋಣೆಯವರ ವಿನೋದ ಪರವಾದ ಸುಕುಮಾರ ವಿಡಂಬನೆ, ಗೋರೂರರ ಹಳ್ಳಿಯ ಜೀವನದ ಹತ್ತು ಮುಖಗಳನ್ನು ನಿರೂಪಿಸು

ವಾಗಿನ ನಗೆ, ವ್ಯಂಗ್ಯಗಳ ಮನೋ ವಿಜ್ಞಾನವನ್ನರಿತು ಸೂಕ್ಷ್ಮವಾಗಿ ವರ್ಣಿಸಿದ ಪು.ತಿ.ನ.ರವರ 'ಕಾಮನ ಬಿಲ್ಲು', 'ರಾಮಚಾರಿಯ ನೆನಪು' ಮರೆಯುವಂತಹವಲ್ಲ. ವ್ಯಕ್ತಿ ಚಿತ್ರಗಳನ್ನು ಬಿಡಿಸುವಲ್ಲಿ ಶ್ರೀ ಸಿದ್ಧವನ ಹಳ್ಳಿ ಕೃಷ್ಣ ಶರ್ಮರು, ಚುರುಕು ದೃಷ್ಟಿಯ ನಾ. ಕಸ್ತೂರಿಯವರ ಹರಟೆಗಳೂ ಚೆನ್ನಾಗಿದೆ. ಜಿ.ಪಿ. ರಾಜರತ್ನಂ, ಡಿ.ವಿ.ಜಿ., ಮಾಸ್ತಿ, ಸಿ.ಕೆ.ವೆಂ. ಹೀಗೆ ಹತ್ತಾರು ಮಂದಿ ಉದಾತ್ತ ವಿಚಾರಗಳನ್ನು ತಿಳಿಯಾಗಿ ಹೇಳುವ ಗದ್ಯವನ್ನು ರಚಿಸಿದ್ದಾರೆ. ಪಾಂಡಿತ್ಯದ ಪ್ರಬಂಧಗಳಲ್ಲಿ ಡಿ.ವಿ.ಜಿ., ಬೇಂದ್ರೆ, ಮುಗಳಿ, ಗೋಕಾಕರ ಕೈಕಾಣಿಸುತ್ತದೆ. ಅ.ನ. ಕೃಷ್ಣರಾಯರ ಪ್ರಬಂಧಗಳಲ್ಲೆಲ್ಲಾ ಇಂಗ್ಲಿಷ್ ಓದಿನ ಬರವಣಿಗೆ, ಸಂಪ್ರದಾಯಗಳ ಅವಹೇಳನ ಎದ್ದು ಕಾಣಿಸುತ್ತದೆ.

'ಹಗಲು ಗನಸು' ಬರೆದ ಎ.ಎನ್. ಮೂರ್ತಿರಾಯರು, ಹರಟೆ ಕೊಚ್ಚುವ ಎನ್ಕೆ, ರಾ.ಶಿ. ಇಂತಹವರು ನಮಗೆ ಮೆಚ್ಚುಗೆಯಾದರೂ ಇಂಗ್ಲಿಷಿನ ಎ.ಜಿ. ಗಾರ್ಡಿನರ್, ಜಿ.ಕೆ. ಚೆಸ್ಟರಟನ್, ಎ.ಎ. ಮಿಲ್ನ, ರಾಬರ್ಟ್ ಲಿಂಡ್ ಮೊದಲಾದ ಹರಟೆಗಾರರ ಮಟ್ಟಕ್ಕೆ ಬಂದು ನಿಲ್ಲಬೇಕಾದರೆ ಸುಭಗತ್ವವನ್ನು ಇನ್ನಷ್ಟು ಬಳಸಿಕೊಳ್ಳಬೇಕಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ಸತ್ಯನಿಷ್ಠವಾದ, ನಿಷ್ಪಕ್ಷಪಾತ, ವಿಮರ್ಶಾತ್ಮಕ ಗದ್ಯ ಗ್ರಂಥರೂಪದಲ್ಲಿ ಬಂದದ್ದು ಏನೇನೂ ಸಾಲದು. ವಿ.ಸೀ., ತೀ.ನಂ.ಶ್ರೀ, ಕಡೆಂಗೋಡ್ಲು, ಬೆಟಗೇರಿ ಕೃಷ್ಣ ಶರ್ಮರು ಒಳ್ಳೆಯ ವಿಮರ್ಶಕರೇ ಆದರೂ ಅಂತಹವರು ಕಡಿಮೆ.

ಹಳೆಗನ್ನಡ ಗ್ರಂಥಗಳನ್ನು ಸಂಪಾದಿಸಿ, ವಿಸ್ತೃತ ವಿಮರ್ಶಾತ್ಮಕ ಮುನ್ನುಡಿಗಳೊಡನೆ ಸಾಹಿತ್ಯವನ್ನು ಒದಗಿಸಿದ ಮೈಸೂರು ವಿಶ್ವವಿದ್ಯಾಲಯದ ಕಾರ್ಯ ಸುತ್ಯವಿದೆ. ಉಳಿದ ಸಾಹಿತ್ಯ ಸಂಘಗಳೂ ಈ ದಿಶೆಯಲ್ಲಿವೆ. ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಗಳ ವಾಕ್‌ಪ್ರೌಢಿಮೆ, ಬಸವನಾಳರ ಅಚ್ಚಗನ್ನಡತನ, ಫ.ಗು. ಹಳಕಟ್ಟಿಯವರ ವಿಷಯ ವೈಶಾಲ್ಯ, ಮುಳಿಯ ತಿಮ್ಮಪ್ಪಯ್ಯರವರ 'ನಾಡೋಜ ಪಂಪ' ದಂತಹ ಹೆಬ್ಬೊತ್ತಿಗೆ ವಿಮರ್ಶಾ ಸಾಹಿತ್ಯಕ್ಕೆ ಹೆಮ್ಮೆಯನ್ನು ತರುತ್ತದೆ.

ಅಲಂಕಾರಬದ್ಧವಾದ ಸುಂದರ ಶೈಲಿಯಲ್ಲಿ ವಿವೇಚನೆ ಮಾಡುತ್ತ ಸಾಗುವ ಶ್ರೀ ಎಸ್.ವಿ. ರಂಗಣ್ಣ, ಎಸ್.ವಿ. ಪರಮೇಶ್ವರ ಭಟ್ಟರ ಶೈಲಿಯೊಂದು ಕಡೆ ಶ್ರೀ ಗೋವಿಂದ ಪೈಗಳ ಸಂಶೋಧಕ ಬರೆಹ, ಲಂಕೇಶ್, ಹಾ.ಮಾ. ನಾಯಕ, ಪಾಟೀಲ ಪುಟ್ಟಪ್ಪ, ದೇವುಡು, ಶಾಸ್ಯಂ, ಕರ್ಪೂರ ಶ್ರೀನಿವಾಸ ರಾವ್, ಸಿ.ಕೆ. ವೆಂಕಟ್ರಾಮಯ್ಯ - ಒಬ್ಬರೇ ಇಬ್ಬರೇ ಹಲವು ನೂರು ಮಂದಿ ಗದ್ಯ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಪತ್ರಿಕಾ ಸಂಪಾದಕರಾಗಿ ತಾತಾಚಾರ್ಯ ಶರ್ಮಾ (ತಾಯಿ ನುಡಿ), ಆಲೂರ ವೆಂಕಟ್ರಾವ್ (ಜಯಕರ್ನಾಟಕ), ಇಂತಹವರು ಜಯಭೇರಿ ಹೊಡೆದಿದ್ದಾರೆ. ಧಾರ್ಮಿಕ ಸಾಹಿತ್ಯದಲ್ಲಿ ಜಿ.ಪಿ. ರಾಜರತ್ನಂರ ಬೌದ್ಧ ತಾಳಿ ಗ್ರಂಥಾನುವಾದ, ದಿನಕರರ 'ಉಪನಿಷದಾಹಾಸ್ಯ', ಮಧುರ ಚೆನ್ನರ 'ಪೂರ್ಣ ಯೋಗ', ಡಿ.ವಿ.ಜಿಯವರ 'ಗೀತಾಸಾರ', ಅನಕೃ ಸಹಾದಿತ 'ಭಾರತೀಯ ಧಾಮಿಕ ಸಾಹಿತ್ಯ' ಇವುಗಳನ್ನು ನೆನೆಯಬೇಕು.

ಭಾಷಾ ಶಾಸ್ತ್ರದಲ್ಲಿ ಶ್ರೀ ಶಂ.ಭಾ. ಜೋಶಿಯವರು. ಗಣಿತದಲ್ಲಿ ಜಿ.ಟಿ. ನಾರಾಯಣರಾಯರು, ಕಾರಂತರ 'ಬಾಲ ಪ್ರಪಂಚ', 'ವಿಜ್ಞಾನ ಪ್ರಪಂಚ' ಗಳು, ಲಕ್ಷ್ಮಣ ಪೈ ರಾಜರತ್ನಂ, ಹೊಯ್ಸಳರ ಶಿಶು ಸಾಹಿತ್ಯ ಇವುಗಳೆಲ್ಲ ಗದ್ಯ ಸಾಹಿತ್ಯದಲ್ಲಿ ಬೆಳೆದ ಪ್ರಗತಿ ಮಾರ್ಗದಲ್ಲಿ ಮೈಲುಗಲ್ಲುಗಳಾಗಿವೆ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯಕ್ಕೆ ಒಳ್ಳೆಯ ಗಟ್ಟಿ ಆಧಾರವಿದೆ. ಅದು ಮುಂದಕ್ಕೆ ಹೆಚ್ಚಿಗೆ ವರ್ಧಿಸುವುದರಲ್ಲಿ ಸಂದೇಹವಿಲ್ಲ. ಲಲಿತ ಸಾಹಿತ್ಯದಲ್ಲಿ, ಕಲಾತ್ಮಕ ಸಾಹಿತ್ಯದಲ್ಲಿ, ಗದ್ಯವನ್ನುಳಿದ ಕಥೆ, ನಾಟಕಾದಿಗಳೇ ಮುಖ್ಯವೆನ್ನುವ ತಪ್ಪು ಅಭಿಪ್ರಾಯವನ್ನು ತೊಲಗಿಸಿ, ನಮ್ಮಲ್ಲಿ ಹೆಚ್ಚಿನ ಜನರು ಗದ್ಯ ಸಾಹಿತ್ಯದ ಕೃಷಿಯಲ್ಲಿ ಕೈ ಹಾಕಬೇಕಿದೆ.

●

## OBITUARY

Dr. K. Shankar, a long time life member of the Association and a Professor of I.I.T. Mumbai, expired on 3rd February, 2000 after a massive heart attack. A man totally dedicated committed to his profession, he was very popular with his students. He was also interested in arts and culture and would never miss a single function at the Association. Though a Scientist by profession, he was also interested in literature and had a large personal collection of Kannada Books. We will all miss his presence at the Association. The Nesaru wishes to convey its sincere condolences to his family members.

ಮೂಗು ಹರಟೆ

# ಮೂಗು ಅಂತಿದ್ದಾಗೇ ಮೂಗು ಮುರೀ ಬ್ಯಾಡ್ರೀ ಮೂರಾಯ್ರೀ ಓದಿ ನೋಡಿ

ಮೂಗು ಅನ್ನುತ್ತಿದ್ದ ಹಾಗೇ ವಿವಿಧ ಆಕಾರದ ಮೂಗು ಕಣ್ಣ ಮುಂದೆ ಸುಳಿಯುತ್ತದೆ. ಸುಂದರ, ಕುರೂಪ, ಎರಡೂ ಇವೆ. ಮೂಗಿನಲ್ಲಿ ಮೊಂಡ ಮೂಗು, ದೊಣ್ಣೆ ಮೂಗು, ಗಿಣಿ ಮೂಗು, ಸಂಪಿಗೆಯಂತೆ ಎಸಳಾದ ಸುಂದರ ಮೂಗು, ಚಪ್ಪಟೆಯಾದ ಮೂಗು, ಬಂಡಿ ಚಕ್ರ ಹರಿದಂತೆ ಕೊರಕಲು ಬಿದ್ದ ಮೂಗು, ಹಿಮಾಲಯದ ಶಿಖರದಂತೆ ತಲೆ ಎತ್ತಿ ನಿಂತ ಮೂಗು, ತತ್ವಜ್ಞಾನಿ ಸಾಕ್ರಟೀಸನ್ ಮೂಗಿನಂತೆ, ನಿಳಾಶಾಲವಾದ ಮೂಗು ಅಂತೂ ಮುಖ ಅಂದ ಮೇಲೆ ಒಂದು ಮೂಗಿರಲೇ ಬೇಕಲ್ಲಾ.

ಅಂತೆಯೇ ಈ ಮೂಗಿಗೆ ಪ್ರಾಧಾನ್ಯತೆಯೂ ಹೆಚ್ಚು. ಇದು ಸೌಂದರ್ಯದ ಪ್ರತೀಕವೂ ಹೌದು. ಕುರೂಪದ ಪ್ರತೀಕವೂ ಹೌದು. ಪ್ರತಿಷ್ಠೆಯ ಪ್ರತೀಕವಂತೂ ಹೌದೇ ಹೌದು. ನೋಡಿ. ರಾಮಾಯಣದಲ್ಲಿ ಶೂರ್ಪನಖಿಯ ಮೂಗು ಕುಯ್ದು ರಾವಣನನ್ನು ಕೆಣಕದಿದ್ದರೆ. ಅಷ್ಟೊಂದು ರಾಮಾಯಣ ಅಲ್ಲಾ ಅಲ್ಲಾ ಮೂಗಾಯಣ ಆಗುತ್ತಿತ್ತೇ ಘಟಾಮ ಘಟ ರಾಕ್ಷಸ ವೀರರೆಲ್ಲಾ ಸತ್ತರು. ಅನೇಕ ಕಪಿ ವೀರರೂ ಸತ್ತರು. ಸೀತೆ ಹನ್ನೊಂದು ತಿಂಗಳು ಅಶೋಕವನದಲ್ಲಿ ಶೋಕ ಸಾಗರದಲ್ಲಿ ಮುಳುಗಿದ್ದಳು. ಸ್ವರ್ಣಲಂಕೆ ಸರ್ವನಾಶವಾಯ್ತು. ಇಷ್ಟೆಲ್ಲಾ ಅವಾಂತರ ಮಾಡಿದ್ದು ಶೂರ್ಪನಖಿಯ ಮೂಗೇ ಅಂತಾ ನನ್ನ ಅಂಬೋಣ.

ಮೂಗಿಗೆ ಸಂಬಂಧಿಸಿದಂತೆ ಅನೇಕ ಹೇಳಿಕೆಗಳು ನಮ್ಮ ರೂಢಿಯಲ್ಲಿದೆ. ಮೂಗು ಹರಕ (ಕಿ) ಅಂದರೆ ನಾಚಿಕೆ ಕೆಟ್ಟೋಳು (ನು) ಅಂತಾ ಅರ್ಥ. ಅಲ್ಯಾಕೆ ಮೂಗು ತೂರ್ಸಕ್ಕೆ ಹೋಗಿದ್ದೆ? ಅಂದ್ರೆ ಅಧಿಕ ಪ್ರಸಂಗತನ ಯಾಕೆ ಮಾಡ್ತೆ ಅಂತ. ಅವನಿಗೆ (ಅವಳಿಗೆ) ಮೂಗಿನ ತುದೀಲೇ ಕೋಪಾಂದ್ರೆ ಮುಂಗೋಪವನ್ನು ಸೂಚಿಸುತ್ತದೆ. ನಮ್ಮ ಕಾವ್ಯಗಳಲ್ಲಿ "ಮೂಗಿನಲಿ ಬೆರಳಿಟ್ಟು ಮುಕುಟವ ತೂಗಿದನು" ಎಂದು ಬರಲ್ವೇ ಇದು ಆಶ್ಚರ್ಯವನ್ನು ಸೂಚಿಸುತ್ತೆ.

ಮೂಗಿಗೆ ಅಲಂಕಾರವಾಗಿ ಭಾರತೀಯ ಹೆಂಗಸರು ನಾನಾ ಒಡವೆಗಳನ್ನು ಧರಿಸುತ್ತಾರೆ. ಇದರಲ್ಲಿ, ಮೂಗುತಿ, ಮುಖಿಧ ಬುಲಾಕು ಇತ್ಯಾದಿ

ಇತ್ಯಾದಿ.... ಇದನ್ನು ಧರಿಸುವುದರ ಮೂಲಕ ತಂತಮ್ಮ ಅಂತಸ್ತನ್ನು ಮೆರೆಸುವ ರೂಢಿಯೂ ಇದೆ. ತಮ್ಮ ತಮ್ಮ ಗಂಡಂದಿರ ಅಂತಸ್ತಿಗೆ ತಕ್ಕಂಥ ಭಾರೀ ಭಾರೀ ಮೂಗುತಿ ಧರಿಸಿ ತಮ್ಮ ಮೂಗನ್ನೇ ಹಿಡಿದುಕೊಂಡಿರುವ ಎಳೆಹರೆಯದ ಸೊಸೆಯರ ಪಾಡು ಹೇಳತೀರದು. ಇದನ್ನು ನೋಡಿಯೇ ಇರಬೇಕು "ಮೂಗಿಗಿಂತ ಮೂಗುತಿಭಾರ" ಅನ್ನುವ ಗಾದೆ ಹುಟ್ಟಿದ್ದು.

ಈ ಮೂಗಿಗೆ ಬರುವ ಖಾಯಿಲೆಗೂ ಒಂದು ಗಾದೆ ಇದೆ. "ನೆಗಡಿಗಿಂತ ಖಾಯಿಲೆ ಇಲ್ಲ, ಬುಗುಡಿಗಿಂತ ಒಡವೆ ಇಲ್ಲಾಂತ" ಈ ನೆಗಡೀ ಬಂದವನು ಯಾವುದಾದರೂ ಸಭೆಸಮಾರಂಭಕ್ಕೆ ಹೋದನೆಂದರೆ ಎಲ್ಲರ ಗಮನಸೆಳೆವ ಕೇಂದ್ರಬಿಂದುವಾಗಿ ಬಿಡುತ್ತಾನೆ. ಸೋರ್ರಾ ಬುಸ್ರಾ ಅನ್ನೋ ಮೂಗು, ಕರವಸ್ತ್ರ ಏನೇನೂ ಸಾಲದೆ ಸ್ನಾನದ ಟವೆಲ್ಲನ್ನೇ ಒಯ್ಯಬೇಕಾಗುತ್ತದೆ. ಮೂಗಲ್ಲಿ ಕಣ್ಣಲ್ಲಿ ನೀರು, ಹಿಂಡಿ ಹಿಂಡಿ ಕೆಂಪಗಾದ ನಾಸಿಕಾಗ್ರ ಒಂದರ ಹಿಂದೆ ಒಂದರಂತೆ ಸೀನು, ಇವನು ಮೂಗು ಸುಧಾರಿಸುವ ಅವಾಂತರ ನೋಡಿ ಸಿಡಿಮಿಡಿಗೊಳ್ಳುವ ಅಕ್ಕಪಕ್ಕದವರು. ಇದೆಲ್ಲಾ ಕಾರಣಕ್ಕಾಗಿ ಅವನು ಆ ಸಮಾರಂಭವನ್ನೇ ರದ್ದು ಮಾಡಿಯಾನೇ ಹೊರತು ಹೋಗಲಾರ. ಡಾಕ್ಟರಬಳಿ ಹೋದರೆ ಅವರಿಗೆ ಈ ಖಾಯಿಲೆಯನ್ನು ಕಂಡರೆ ತಾತ್ಸಾರ ಏ.... ನೆಗಡಿ ಅಂಥಾ ಜುಜುಬಿ ಖಾಯಿಲೆಗೆ ಔಷಧಿಯೇ? ಎಂದು ಮೂಗು ಮುರಿಯುತ್ತಾ ಹೇಳುತ್ತಾರೆ. ರಾತ್ರೀ ಎಲ್ಲಾ ನಿದ್ದೆ ಕೆಡಿಸುತ್ತಾ, ತಲೆನೋವನ್ನು ತರುತ್ತಾ, ಊಟ ತಿಂಡಿಯಲ್ಲಿ ರುಚಿ ಇಲ್ಲದೆ ಗೋಳು ಹೊಯ್ದುಕೊಳ್ಳುವ ನೆಗಡಿ ಜುಜುಬಿಯೇ! ಕೆಲವರ ಮನೆಯಲ್ಲಿ ನೆಗಡಿದಿಂಬೂಂತಾ ಇರುತ್ತೆ ಮನೆಯಲ್ಲಿರೋ ಹಳೇ ಬಟ್ಟೇನೆಲ್ಲಾ ಗಂಟುಕಟ್ಟಿ ಅಗಸನ ಗಂಟನ್ನು ಹೋಲುವ ಒಂದು ದಪ್ಪಗಂಟು ಇದನ್ನು ನೆಗಡಿ ಬಂದವರೆಲ್ಲಾ ರಾತ್ರಿ ತಲೆ ಕೆಳಗೆ ಇಟ್ಟು ಮಲಗುತ್ತಾರೆ. ಇದರಿಂದ ನೆಗಡಿ ಸಂಕಟ ಕಡಿಮೆಯಾಗುತ್ತಂತೆ. ನಮ್ಮಜ್ಜೀ ಒಂದು ವೈದ್ಯ ಹೇಳುತ್ತಿದ್ದರು. ಅರಿಶಿನ ರಾಗಿ ಹಿಟ್ಟು ಕೆಂಡದ ಮೇಲೆ ಹಾಕಿ ಹೊಗೆ ಕುಡಿದು ಒಣ ಅವಲಕ್ಕಿ, ಹುರಿಗಡ್ಲೆ ತಿಂದು ನೀರು ಕುಡಿಯದೆ ಮಲಗಿದರೆ. ನೆಗಡಿ ಹೋಗುವುದೆಂದು.

ಇನ್ನು ಕೆಲವರು ನಶ್ಯವನ್ನೂ ಹಾಕಿ ನೆಗಡಿ ಓಡಿಸಲು ಪ್ರಯತ್ನ ಪಡುವರಂತೆ. ಈ ನಶ್ಯ ಹಾಕುವುದು ಮೂಗಿಗೆ ಸಂಬಂಧಿಸಿದ ಒಂದು ದುಶ್ಚಟ ಇದನ್ನು 'ಜ್ಞಾನ ಚೂರ್ಣ'ವೆಂದು ಬದಾಮಿ ಕೊಚ್ಚುವವರೂ ಉಂಟು. ಈ ಘಾಟಿನ ಪುಡಿಯ ಚಟವನ್ನು ಮಹಮಹಾ ಪಂಡಿತರು ಶಾಸ್ತ್ರಿಗಳು, ಸಂಗೀತಗಾರರು ಇವರಲ್ಲಿ ಬಹಳ ಜಾಸ್ತಿ ಕಂಡು ಬರುತ್ತಿತ್ತು. 'ಅ.ನ. ಕೃಷ್ಣರಾಯರು ತಮ್ಮ ಮಾವನ ಮನೆ ಕಾದಂಬರಿಯಲ್ಲಿ ದಾರ ಸುತ್ತಿದ ಬೀಡಿ ಮೈಲಿಗೆ ಸಿಗರೇಟು ಮಡಿ ಎಂದು ವಿಭಾಗ ಮಾಡಿರುವಂತೆ. ಮಡಿ ಮಡಿಯಾಗಿ ನಶ್ಯ ಏರಿಸುವವರು ಬಹುಜನ ಹಿಂದೆ ಇರುತ್ತಿದ್ದರು. ಇವರ ಸೊಂಟದಲ್ಲಿ ಯಾವಾಗಲೂ ಒಂದು ಕಾಫೀ ಸೋಸುವ ಅರಿವೆಯನ್ನು ಹೋಲುವ ಕರವಸ್ತ್ರ ಇರಲೇ ಬೇಕಿತ್ತು. ಒಂದು ಚಿಟಿಕಿ ಏರಿಸಿ ಕುಳಿತರೆ ಸಾಕು ಇವರ ಜ್ಞಾನ ಭಂಡಾರ ತೆರೆದಂತೆಯೇ!

ನಮ್ಮೂರಿನ ಶಾಸ್ತ್ರಿಗಳಿಬ್ಬರು ಕಾರಣಾಂತರ ದಿಂದ ಜಗಳ ಕಾದು ಎರಡೂ ಕುಟುಂಬ ಒಬ್ಬರ ಮನೆಗೆ ಒಬ್ಬರು ಹೋಗುವುದು ಬರುವುದು ಮಾತನಾಡುವುದು ಬಿಟ್ಟಿದ್ದರೂ, ಇಬ್ಬರೂ V.P. ಮುಖಾಂತರ ಮದ್ರಾಸ್ ನಶ್ಯವನ್ನು ತರಿಸಿ ಹಂಚಿಕೊಳ್ಳುತ್ತಿದ್ದರು. ಇದನ್ನು ನೋಡಿ ಜನ ಇದಲ್ಲವೇ ಈ ನಾಸಿಕ ಚೂರ್ಣದ ನಂಟು ! ಎನ್ನುತ್ತಿದ್ದರು.

ನಶ್ಯ ಏರಿಸಿದವರ ಹತ್ತಿರ ಮಾತನಾಡಿದರೆ ಕೆಲ ಅನುನಾಸಿಕ ಅಕ್ಷರವನ್ನು ವಿಚಿತ್ರವಾಗಿ ಹೊರಡಿಸುತ್ತಾರೆ. ಇದಲ್ಲದೆ ಕೆಲ ಮಹಾನು ಭಾವರು ಮೂಗಿನಲ್ಲೇ ಮಾತನಾಡುವವರೂ ಇರುತ್ತಾರೆ. ಇವರನ್ನು 'ಅನುನಾಸಿಕ' ಎಂದು ಕರೆಯುತ್ತಾರೆ. ಇಲ್ಲಾ ಙ, ಞ, ಣ, ನ, ಮ ಎನ್ನುವುದೂ ಉಂಟು. ನಶ್ಯ ಒಮ್ಮೆ ನಾನು ಮಾಡಿದೆ! ಗೊತ್ತೇ?!!

ನಾಲ್ವಡಿ ಕೃಷ್ಣರಾಜ ಒಡೆಯರ ನವರಾತ್ರೀ ದರ್ಬಾರು ಉತ್ಸವ, 'ವಿದ್ವಾನ್ ಶೇಷಣ್ಣ'ನವರು ಮತ್ತು 'ವಿದ್ವಾನ್ ಸುಬ್ಬಣ್ಣ'ನವರು ವೀಣಾವಾದನಕ್ಕೆ ಕುಳಿತಿದ್ದಾರೆ. ಯಾಕೋ ಸಂಗೀತ ಕಛೇರಿ ಸಪ್ಪೆಯಾಗಿದೆ. ಅವರ ಕಲ್ಪನಾ ಲೋಕದರಂಗ ತರಂಗ ಮಂಕಾಗಿದೆ. ಶೇಷಣ್ಣನವರು ಪಕ್ಕವಾದ್ಯಕ್ಕೆ ಬಿಟ್ಟು ಬಂದೆ ಎಂದರು ಸುಬ್ಬಣ್ಣನವರೂ ಜೇಬು ತಡಕಿದರು. 'ನಾನೂ ಮರೆತೆ' ಎಂದರು. ಅಂತೂ ಹಾಗೂ ಹೀಗೂ ಸಪ್ಪೆ ಕಛೇರಿ ಮುಗಿಸಿ ಮನೆ ಸೇರಿದಾಗ ಶಾಲು ಜೋಡಿಯೊಂದಿಗೆ ನಶ್ಯದ ಡಬ್ಬಿ ಅವರನ್ನು ಮನೆಯಲ್ಲಿ ಎದುರು ಗೊಂಡಿತಂತೆ. ಸೂಕ್ಷ್ಮ ಮತಿಗಳಾದ ಪ್ರಭುಗಳು ಅಂದಿನ ಸಪ್ಪೆ ಕಛೇರಿಯ ಕಾರಣ ತಿಳಿದಿದ್ದರು. ಅದಕ್ಕೆ ಸನ್ಮಾನವನ್ನು ಮಾಡಿದರು. B.G.L. ಸ್ವಾಮಿಯವರು ಇಂತಹದೇ ಇನ್ನೊಂದು ಘಟನೆಯನ್ನು ಹೇಳುತ್ತಾರೆ.

'ಪಾಲಕ್ಕಾಡು ರಾಮಭಾಗವತ'ರ ಹಾಡುಗಾರಿಕೆ 'ತಿರುವಾಲಂ ಗಾಡು ಸುಂದರೇಶ ಅಯ್ಯರ್'ರವರ ಪಿಟೀಲು 'ಪಳನಿ ಸುಬ್ರಹ್ಮಣ್ಯ ಪಿಳ್ಳೆಯವರು ಮೃದಂಗ ಕಛೇರಿ ನಡೆಯುತ್ತಿತ್ತು. ಏನು ಕಾರಣವೋ ಭಾಗವತರ ಕೊರಲಿನೊಂದಿಗೆ ತಂಬೂರಿ ಶೃತಿ ಸೇರದು, ಇವೆರಡರ ಜೊತೆ ಪಿಟೀಲು ಶೃತಿ ಸೇರದು. ನಾಲ್ಕೂ ನಾಲ್ಕೂ ಶೃತಿಗಳಲ್ಲಿ ಹೊರಟಿವೆ. ಅರ್ಧ ಘಂಟೆಯಾಯ್ತು. ಒಂದು ಘಂಟೆಯಾಯ್ತು. ಶೃತಿಯೇ ಸೇರದೆ ಸಭೆಯಲ್ಲಿ ಗುಜ ಗುಜು ಗೊಣಗಾಟ ಪ್ರಾರಂಭವಾಯಿತು ಒಂದು ಘಟೆಯಾಯ್ತು ಶೃತಿಯೇ ಸೇರದೆ ಸಭೆಯಲ್ಲಿ ಗುಜ , ಗುಜು ಗೊಣಗಾಟ ಪ್ರಾರಂಭವಾಯ್ತು. ಸಭೆಯಲ್ಲಿ ಕುಳಿತಿದ್ದ ಚಿತ್ತೂರು ಸುಬ್ರಮ್ಮಣ್ಯ ಪಿಳ್ಳೆಯವರು 'ಶೃತಿ ಶುದ್ಧವಾದ ಸಂಗೀತ ಈಗ ಯಾರಿಗೆ ಬೇಕಾಗಿದೆ. ಅಪಶೃತಿ ಹಾಡಿದವರಿಗೇ ಬಿರುದು ಬಾವಲಿ ದೊರಕುವದು ಎಂದು ಕೊಂಡು ಮಾಡಿದರು. ಅಪಶೃತಿಯ ಗೋಳಾಟ ಇನ್ನೂ ಅರ್ಧ ಗಂಟೆ ನಡೆಯಿತು. ಅದೇ ಸಭೆಯಲ್ಲಿದ್ದ 'ಮಹಾರಾಜ ಪುರಂ ವಿಶ್ವನಾಥ ಅಯ್ಯರವರು' ಎದ್ದು ರಂಗ ಮೇಲೆ ಹೋಗಲಗಿ ತಮ್ಮ ಜೇಬಿನಿಂದ ನಶ್ಯದ ಡಬ್ಬಿತೆಗೆದು 'ಮುಂದಿಟ್ಟು ''ಪವಾಯಿಲ್ಲೆರ ಪೊಟ್ಟು ಕೊಳ್ಳುಂ'' ಎಂದು ಹೇಳಿ ಕೆಳಗಿಳಿದು ಬಂದ ಸಭಾ ಮರ್ಯಾದೆಯನ್ನೂ ಮರೆತು ಎಲ್ಲರೂ ನಾಸಿಕ ಚೂರ್ಣ (ನಶ್ಯ)ವನ್ನು ಏರಿಸಿದರು. ಅಹಾ! ಏನು ಪವಾಡ ! ಎಲ್ಲರೂ ಶೃತಿಯನ್ನು ಸರಿಯಾಗಿ ಸೇರಿಸಿದರು. ಶ್ರೋತೃಗಳಿಗೆ ಸಂಗೀತ ಸುಧೆಯನ್ನು ಸುರಿಸಿದರು. ಇದಕ್ಕೆ ನೀವೇನೆನ್ನುವಿರಿ ಮೂಗು ಮರಿಯುಲ್ಲಾ ತಾನೆ?

## CONDOLENCE

We learnt with deep sense of sorrow the sad demise of Smt. Lalita Balu. She had been actively associated with the activities of the Association over a long period and also one of the Member of the present Managing Committee. In the passing away of Smt. Balu, the Association has lost a well wisher. We pray to the almighty to give courage to the family members to bear the loss.

May the departed soul rest in peace.

*Hon. Secretary*

# ಸುತ್ತಮುತ್ತ

### ಮೈಸೂರು ಸಂಗೀತ ವಿದ್ಯಾಲಯ, ಡೊಂಬಿವಲಿ, ಇವರ ಆಶ್ರಯದಲ್ಲಿ ನಡೆದ ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜ ಉತ್ಸವ

### ಉತ್ತಮ ಜೀವನ ಸಾಗಿಸಲು ನಿರ್ಬಂಧಗಳು ಅನಿವಾರ್ಯ. -- ಎಂ.ಎ.ಕಿಣಿ

'ಯಾವುದೇ ಕಡಿವಾಣವಿಲ್ಲದೆ ಜೀವನ ಸಾಗುತ್ತಿದ್ದರೆ ದುಷ್ಪರಿಣಾಮಗಳೇ ಉಂಟಾಗಿ ಸಮಾಜ ಕಲುಷಿತವಾಗುವ ಸಾಧ್ಯತೆ ಇದೆ. ಜೀವನ ಒಂದು ಸುವ್ಯವಸ್ಥಿತ ರೀತಿಯಲ್ಲಿ ಸಾಗಬೇಕಾದರೆ ನಿರ್ಬಂಧಗಳು ಅನಿವಾರ್ಯ. ಇಂತಹ ನಿರ್ಬಂಧಗಳನ್ನು ಶ್ರೀ ಪುರಂದರ ದಾಸರಂತಹ ಸಂತರು ತಮ್ಮ ಆಚರಣೆ ಮತ್ತು ಕೃತಿಗಳ ಮೂಲಕ ಉಪದೇಶಿಸಿ ಸಮಾಜ ಸುಧಾರಣೆಗೆ ಮಹದುಪಕಾರ ವನ್ನು ಮಾಡಿದ್ದಾರೆ' ಎಂದು ಸುಪ್ರೀಂ ಕೋರ್ಟಿನ ಸುಪ್ರಸಿದ್ಧ ನ್ಯಾಯವಾದಿ ಶ್ರೀ ಎಂ.ಎ. ಕಿಣಿಯವರು ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದವರು ಏರ್ಪಡಿಸಿದ್ದ ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗ ರಾಜರ ಆರಾಧನಾ ಮಹೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ನುಡಿದರು.

ಶ್ರೀ ಕಿಣಿಯವರು ಮುಂದುವರೆದು ಶ್ರೀ ಪುರಂದರ ದಾಸರು ಐದು ಲಕ್ಷಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ದುರ್ದೈವದಿಂದ ಕೇವಲ ಸಾವಿರಾರು ಕೃತಿಗಳು ಮಾತ್ರ ದೊರಕಿವೆ; ಈ ಕೃತಿಗಳು ಮುಂದೆ ಜೀವಂತವಾಗಿರಬೇಕಾದರೆ ಇಂದಿನ ಪೀಳಿಗೆಗೆ ಬೋಧಿಸುವುದೂ ಅತ್ಯಾವಶ್ಯಕ. ಮೈಸೂರು ಸಂಗೀತ ವಿದ್ಯಾಲಯದ ಮೂಲಕ ಶ್ರೀಮತಿ ಉಮಾ ನಾಗಭೂಷಣ್ ದಾಸರ ಪದಗಳನ್ನು ಮಕ್ಕಳಿಗೆ ಬೋಧಿಸುತ್ತಿರುವುದು ಸ್ತುತ್ಯಾರ್ಹ ಎಂದು ತಿಳಿಸಿ ವಿದ್ಯಾಲಯದ ಚಟುವಟಿಕೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಅಂದು ನಡೆದ ಶ್ರೀ ಪುರಂದರ ದಾಸರ ಕೃತಿಗಳ ಜುಗಲ ಬಂದಿ ಕಾರ್ಯಕ್ರಮದ ಬಗ್ಗೆ ತಮ್ಮ ಸಂತೋಷ ಸೂಚಿಸಿ ಕಲಾವಿದೆಯರಾದ ವಿದುಷಿ ಉಮಾ ನಾಗಭೂಷಣ್ ಮತ್ತು ಶ್ರೀಮತಿ ರಸಿಕಾ ಪುಡ್ಕೆಯವರಿಗೆ ಪುಷ್ಪಗುಚ್ಛವನ್ನಿತ್ತು ಅಭಿನಂದಿಸಿದರು.

ಶ್ರದ್ಧೆ ಮತ್ತು ಆಸಕ್ತಿಯಿಂದ ಸಂಗೀತ ಕಲಿಯುತ್ತಿರುವ ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸುವ ಸಲುವಾಗಿ ವಿದ್ಯಾಲಯದವರು ಸ್ಥಾಪಿಸಿರುವ 'ಶಿಷ್ಯ ವೇತನ ನಿಧಿ' (Scholarship Fund)ಯ ಸದುದ್ದೇಶವನ್ನು ಪ್ರಶಂಸಿಸಿ ತಾವು ಆ ನಿಧಿಗೆ ತಮ್ಮ ತೀರ್ಥರೂಪ ಮತ್ತು ಮಾತೋಶ್ರೀಯವರ ಸ್ಮರಣಾರ್ಥ 25,000/-ರೂ. ಗಳನ್ನು ಕೊಡುವುದಾಗಿ ಪ್ರಕಟಿಸಿದರು. ಈ ಸಾಲಿನ ಶಿಷ್ಯ ವೇತನ ಪಡೆದ ವಿದ್ಯಾರ್ಥಿಗಳಿಗೆ ಶ್ರೀಮತಿ ಆಶಾ ಕಿಣಿಯವರು ಶಿಷ್ಯ ವೇತನವನ್ನು ವಿತರಣೆ ಮಾಡಿದರು.

### ದೆಹಲಿಯಲ್ಲಿ ಏಪ್ರಿಲ್ 8,9 ರಾಷ್ಟ್ರೀಯ ಕನ್ನಡ ಸಮ್ಮೇಳನ

ನವದೆಹಲಿ: ಏಪ್ರಿಲ್ 8 ಮತ್ತು 9ರಂದು ದೆಹಲಿಯಲ್ಲಿ 17ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ ಎಂದು ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ತಿಳಿಸಿದ್ದಾರೆ.

'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಬಾಲಗೋಷ್ಠಿ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ವಿಶೇಷ ಸ್ಮರಣ ಸಂಚಿಕೆಯನ್ನು ಹಾಗೂ ಕನ್ನಡ ಬರಹಗಾರರ ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು. ಶ್ರೇಷ್ಠ ಹೊರನಾಡ ಕನ್ನಡಿಗರ, ಶ್ರೇಷ್ಠ ದೆಹಲಿ ಕನ್ನಡಿಗ, ಶ್ರೇಷ್ಠ ಬ್ಯಾಂಕರ್ ಪ್ರಶಸ್ತಿಗಳನ್ನು ಈ ಸಮ್ಮೇಳನದಲ್ಲಿ ನೀಡಲಾಗುವುದಲ್ಲದೆ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರನ್ನು ಸನ್ಮಾನಿಸಲಾಗುವುದು.

ದೇಶದಾದ್ಯಂತ ಸಾಹಿತಿಗಳು, ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಸುಮಾರು ಎರಡು ಸಾವಿರ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿರುವರೆಂದು ಸಾಮಗ ಅವರು ತಿಳಿಸಿದ್ದಾರೆ.

ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ದೊರಕಿಸಿ ಕನ್ನಡಿಗರಿಗೆ ಎಲ್ಲ ರಂಗಗಳಲ್ಲೂ ಸರಿಯಾದ ನ್ಯಾಯ ದೊರಕಿಸುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ ಎಂದು ಸಾಮಗ ಅವರು ಹೇಳಿದ್ದಾರೆ.

### ತುಳು ಸಂಘ ಬೋಯಿಸರ್‌ದ ಪ್ರಥಮ ವಾರ್ಷಿಕೋತ್ಸವ

ಮಕ್ಕಳಲ್ಲಿ ಮನುಷ್ಯತ್ವ ಅರಳಿಸುವಂತೆ ವಿಚಾರಗಳನ್ನು ಪಾಲಕರು ತುಂಬಬೇಕು. ಸೂಕ್ಷ್ಮಗ್ರಾಹಿಗಳಾದ ಎಳೆಯರು ಹಿರಿಯ ಆಚರಣೆಗಳನ್ನು ನೇರವಾಗಿ ಅನುಸರಿಸುತ್ತಾರೆ. ಮಾನವ ಪ್ರೀತಿಯ ನೆಲೆಯಿಂದ ಬದುಕು ರೂಪಿಸುವಂತೆ ಅರಿವನ್ನೀಯಬೇಕೆ ವಿನಹ ಕೇವಲ ಶ್ರೀಮಂತಿಕೆಯಿಂದ ಬದುಕು ಹಸನಾಗುವುದಿಲ್ಲ. ಜೀವನದ ಸುಗಮತೆಗೆ ಸಂಸ್ಕೃತಿ, ಕಲೆ, ಸಾಹಿತ್ಯಾದಿಗಳ ಅಭ್ಯಾಸವೂ ಅವಶ್ಯ. ಸಹಬಾಳುವೆ, ಸಮಾನತೆ, ಸುಸಂಸ್ಕೃತತೆ ಮೊದಲಾದ ಸದ್ಗುಣಗಳನ್ನು ಕಿರಿಯರಿಗೆ ತಿಳಿಸಿ ಉತ್ತಮ ಮಾನವರನ್ನಾಗಿ ಮಾಡುವ ಇಂದಿನ ಪರಿಸ್ಥಿತಿಯಲ್ಲಿ ತೀರಾ ಆವಶ್ಯವಾಗಿದ್ದು ಮಕ್ಕಳ ಸರ್ವತೋಮುಖ ವಿಕಸನಕ್ಕೆ ಮಾತೃಶಕ್ತಿ ಪ್ರಧಾನ. ತುಳುವರು-ತುಳು ಕನ್ನಡ ಭಾಷೆಯನ್ನು ಮರೆತಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಂತೆ ಅಂತೆಯೇ ಮಾತೆಯಂತೆ ಮಾತೃಭಾಷೆ; ಕಿರಿಯ ದೋಷಗಳನ್ನು ತೆರೆದ ಕಣ್ಣಿನಿಂದ ನೋಡಬೇಕು ಎಂದು ಎಚ್ಚರಿಕೆಯ ಹಿತವಚನಗಳನ್ನು. ತುಳು ಸಂಘ, ಬೋಯಿಸರದ ಪ್ರಥಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಧ್ಯಕ್ಷಸ್ಥಾನದಿಂದ ಸೋಮಯ್ಯಾ ಕಾಲೇಜಿನ ಕನ್ನಡ ವಿಭಾಗ ಪ್ರಮುಖರೂ ಬಹುಮುಖ ವ್ಯಕ್ತಿತ್ವದ ಸಾಹಿತಿ ಡಾ। ಸಂಜೀವ ಶೆಟ್ಟಿಯವರು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಭಿವಂಡಿ ಹೋಟೇಲ್ ಓನರ್ಸ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಕೆ.ಪಿ. ಪ್ರಭಾಕರ ಎಲ್. ಶೆಟ್ಟಿಯವರು ಮಾತನಾಡುತ್ತಾ ತುಳು ಸಂಸ್ಕೃತಿಯನ್ನು ನಾವೆಲ್ಲ ಚೆನ್ನಾಗಿ ಅರಿಯಬೇಕು. ಸಂಘಟನೆಗಳನ್ನು ಬೆಳೆಸಬೇಕು. ಪ್ರತಿಯೋರ್ವ ವ್ಯಕ್ತಿ ಸಾಲ ಸೋಲಾದಿಗಳನ್ನು ಮಾಡದೇ ಸತ್ಯದ ದಾರಿಯಲ್ಲಿ ನಡೆಯುತ್ತ ತನ್ನ ಬದುಕಿನ ದಾರಿಯನ್ನು ತಾನೇ ರೂಪಿಸಿಕೊಳ್ಳಬೇಕು. ತುಳುವರ ಪರಸ್ಪರ ಬಾಂಧವ್ಯದ ಭಾವ ಬೆಳೆಸಿಕೊಳ್ಳಬೇಕು. ದೈವೀ ಶಕ್ತಿಗಳೇ ನಮಗೆ ಗುರುಗಳಾಗಿದ್ದರು. ಪ್ರಯತ್ನಶೀಲತೆ ನಮ್ಮಲ್ಲಿ ಇರಬೇಕು ಜಾತಿ ಯಾವುದೇ ಇರಲಿ ತುಳುವರು ನಾವೆಲ್ಲ ಒಂದೇ ತಾಯಿಯ ಮಕ್ಕಳಾಗಿ ಒಗ್ಗಟ್ಟಿನಿಂದ ಬಾಳಬೇಕು ಎಂದು ನುಡಿದರು.

### 'ಸೂರ್ಯನಿಗೊಂದು ಸವಾಲು': ನಾಟಕ ಕೃತಿ ಬಿಡುಗಡೆ

ಶ್ರೀ ಪ್ರಕಾಶ ರಾವ್ ಪಯ್ಯಾರು ಅವರ ಸೂರ್ಯನಿಗೊಂದು ಸವಾಲು ಎಂಬ ನಾಟಕ ಕೃತಿಯನ್ನು ಇತ್ತೀಚೆಗೆ ಮುಂಬಯಿ ಪ್ರೆಸ್ ಕ್ಲಬ್‌ನಲ್ಲಿ 'ದಿ ಟೈಮ್ಸ್ ಆಫ್ ಇಂಡಿಯಾ' ದಿನ ಪತ್ರಿಕೆಯ ಸುದ್ದಿ ಸಂಪಾದಕ ಬಿ. ಚಂದ್ರಮೋಹನ ರಾವ್

ಅವರು ಬಿಡುಗಡೆಗೊಳಿಸಿದರು. ಅವರು ಮಾತಾಡುತ್ತ ಕನ್ನಡ ರಂಗ ಸಾಹಿತ್ಯಕ್ಕೆ ಈ ನಾಟಕ ಒಂದು ಮಹತ್ತರ ಕೊಡುಗೆಯಾಗಿ ಸೇರ್ಪಡೆಗೊಳ್ಳಲಿದೆ ಎಂದು ಅಭಿಪ್ರಾಯಪಟ್ಟರು.

ಕೃತಿ ಪರಿಚಯ ಮಾಡುತ್ತಾ ಡಾ.ಕೆ. ರಘುನಾಥ್ ಅವರು ಈ ನಾಟಕ ವೈದಿಕ ನೆಲೆಯಲ್ಲಿ ಹುಟ್ಟುಕೊಂಡ ಬಂಡಾಯದ ವಸ್ತುವುಳ್ಳ ಹೊಸ ದೃಷ್ಟಿಕೋನದ ನಾಟಕ ಎಂದು ಹೇಳಿದರು. ಮುಂಬಯಿ ಬಾರ್ ಅಸೋಸಿಯೇಶನ್ ಅಧ್ಯಕ್ಷ ನ್ಯಾಯವಾದಿ ಎಚ್.ಎಸ್. ಶ್ರೀಪಾದ ಮೂರ್ತಿ ಅವರು ಲೇಖಕರು ಉಪನಿಷತ್, ಮನುಸ್ಮೃತಿ ಹಾಗೂ ದಾಸರ ಪದಗಳು ಮತ್ತು ಜಾನಪದಗೀತೆಗಳನ್ನು ನಾಟಕದಲ್ಲಿ ಬಳಸಿಕೊಂಡ ರೀತಿ ಗಮನಾರ್ಹವೆಂದು ಹೇಳಿದರು. ಕೃತಿಕಾರ ಪ್ರಕಾಶ ರಾವ್ ಪಯ್ಯಾರು ಅವರು ತಮ್ಮ ಅನಿಸಿಕೆ ಹಾಗೂ ಪ್ರೇರಣೆಗಳ ಬಗ್ಗೆ ವಿವರಿಸಿದರು.

ಹವ್ಯಾಸಿ ನಾಟಕ ತಂಡ 'ಧ್ವನಿ' ಕಾರ್ಯಕ್ರಮವನ್ನು ಆಯೋಜಿಸಿದ್ದು, ಸೋಮನಾಥ ಕರ್ಕೇರ ಅವರು ಕಾರ್ಯಕ್ರಮವನ್ನು ನಿರ್ವಹಿಸಿದ್ದರು.

### ಕನ್ನಡ ಸಂಘ
### ಕೆ.ಜೆ. ಸೋಮ್ಮೆಯಾ ಕಾಲೇಜು

ಮುಂಬಯಿಯ ಸುಪ್ರಸಿದ್ಧ ವಿದ್ಯಾ ಸಂಸ್ಥೆ ಸೋಮ್ಮೆಯಾ ವಿದ್ಯಾ ವಿಹಾರ ಸಂಕುಲದ ಹಾಗೂ ಕೆ.ಜೆ. ಸೋಮ್ಮೆಯಾ ಮಹಾ ವಿದ್ಯಾಲಯಗಳ ಸಂಸ್ಥಾಪಕರಾದ ಭಾರತದ ಖ್ಯಾತ ಉದ್ಯಮಿಗಳೂ ಸಮಾಜ ಸೇವಕರೂ ಶಿಕ್ಷಣ ತಜ್ಞರೂ ಆಗಿದ್ದ ದಿವಂಗತ ಕೆ.ಜೆ. ಸೋಮ್ಮೆಯಾ ಅವರಿಗೆ ಕೇಂದ್ರ ಸರಕಾರವು ಈ ಸಲ ಪದ್ಮಭೂಷಣ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿ ಗೌರವಿಸುವುದು ಕೆ.ಜೆ. ಸೋಮ್ಮೆಯಾ ಅವರ ಬಹುಮುಖ ಸೇವೆಗಳಿಗೆ ಸಂದ ಗೌರವವೇ ಆಗಿರುತ್ತದೆ. ಕೆ.ಜೆ. ಸೋಮ್ಮೆಯಾ ಕಾಲೇಜ್ ಆಫ್ ಆರ್ಟ್ಸ್ ಎಂಡ್ ಕಾಮರ್ಸ್‌ನಲ್ಲಿ 1966ರಿಂದ ಕನ್ನಡ ಶಿಕ್ಷಣಕ್ಕೆ ಪೂರ್ಣ ಅವಕಾಶವನ್ನು ಕಲ್ಪಿಸಿಕೊಟ್ಟು, ಇಂದೂ ಹನ್ನೊಂದನೆಯ ಇಯತ್ತೆಯಿಂದ ಪಿ.ಎಚ್.ಡಿ. ವರೆಗೆ ಕನ್ನಡ ಅಧ್ಯಯನ ನಡೆಯುವಂತೆ ಪೂರ್ಣ ಸಹಾಯ ಸಹಕಾರಗಳನ್ನಿತ್ತ ಮಹಾನ್ ಚೇತನ ಕನ್ನಡಾಭಿಮಾನಿ ಕನ್ನಡಿಗರ ಬಂಧು ಅವರಾಗಿದ್ದಾರೆಂಬುದನ್ನು ಮುಂಬಯಿ ಕನ್ನಡಿಗರು ಪ್ರಾತಃ ಸ್ಮರಣೀಯರಂತೆ ಅವರನ್ನು ಕೃತಜ್ಞತೆಯಿಂದ ನೆನೆಯ ತಕ್ಕುದಾಗಿದೆ.

ಮುಂಬಯಿ ಕನ್ನಡಿಗರ ಶೈಕ್ಷಣಿಕ ಇತಿಹಾಸದಲ್ಲಿ ಧ್ರುವನಕ್ಷತ್ರದಂತೆ ಕಂಗೊಳಿಸುತ್ತಿರುವರಲ್ಲದೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತ ಹಿರಿಮೆ ಕೀರ್ತಿ ಅವರದ್ದಾಗಿರುತ್ತದೆ. ಕೆ.ಜೆ. ಸೋಮ್ಮೆಯಾ ಅವರ ಕನ್ನಡ ಸೇವೆ ಕನ್ನಡೇತರರಿಗೂ ಕನ್ನಡಿಗರಿಗೂ ಆದರ್ಶನೀಯ ವಾಗಿರುತ್ತದೆ. ಪದ್ಮಭೂಷಣವನ್ನು ಮರಣೋತ್ತರವಾಗಿ ಪಡೆದಿರುವ ಕೆ.ಜೆ. ಸೋಮ್ಮೆಯಾ ಅವರ ಅಪೂರ್ವವಾದ ಸಾಧನೆಗೆ ಅವರ ಸುಪುತ್ರ ಡಾ. ಶಾಂತಿಲಾಲ ಕೆ. ಸೋಮ್ಮೆಯಾ ಮತ್ತವರ ಪರಿವಾರ ವನ್ನು ಕೆ.ಜೆ. ಸೋಮ್ಮೆಯಾ ಕಾಲೇಜಿನ ಕನ್ನಡ ವಿದ್ಯಾರ್ಥಿಗಳ ಕನ್ನಡ ಶಿಕ್ಷಕರ ಪರವಾಗಿ ಪ್ರಾಂಶು ಪಾಲ ಡಾ. ಎಸ್. ಕೆ. ಭವಾನಿ ಮತ್ತು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಸಂಜೀವ ಶೆಟ್ಟಿ ಅವರುಗಳು ಹಾರ್ದಿಕವಾಗಿ ಅಭಿನಂದಿಸಿರುತ್ತಾರೆ.

### ಮುಂಬಯಿ ಕನ್ನಡ ಸಂಘದ 63ನೇ ವಾರ್ಷಿಕೋತ್ಸವ

ಮಾಟುಂಗದಲ್ಲಿರುವ ಮುಂಬಯಿ ಕನ್ನಡ ಸಂಘದ 63ನೇ ವಾರ್ಷಿಕೋತ್ಸವ ತಾ. 26-12-99 ರಂದು (ಭಾನುವಾರ) ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಆಚರಿಸಲಾಯಿತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಮುಂಬಯಿ ಸಮಾಜ ಸೇವಕರೂ, ಸುಪ್ರೀಂ ಕೋರ್ಟಿನ ನ್ಯಾಯವಾದಿ ಆಗಿರುವ ಎಂ. ವಸಂತ ಕಿಣಿಯವರು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಮುಂಬಯಿ ಸಮಾಜ ಸೇವಕ, ಉದ್ಯಮಿ, ವೀರಶೈವ ಸಹಕಾರಿ ಬ್ಯಾಂಕಿನ ಮಾಜಿ ಅಧ್ಯಕ್ಷರು ಆದ ಮನೋಹರ ಎಂ. ಕೋರಿಯವರು ವಹಿಸಿದರು.

ಕಿಣಿಯವರು ತಮ್ಮ ಭಾಷಣದಲ್ಲಿ ''ಮುಂಬಯಿ ಕನ್ನಡ ಸಂಘಕ್ಕೆ ಕಳೆದ ಹಲವಾರು ವರುಷಗಳಿಂದ ಶ್ರೀ ಜಯಚಾಮರಾಜ ಒಡೆಯರ್, ಶ್ರೀ ಎಸ್. ನಿಜಲಿಂಗಪ್ಪ ಇಂತಹ ಅನೇಕ ಮಹನೀಯರು ಭೇಟಿ ಕೊಟ್ಟು ವಿಷಯ ತಿಳಿದು ಸಂತೋಷವಾಯಿತು. ತಾನು ತನ್ನಿಂದ ಆಗುವ ಪೂರ್ಣ ಸಹಕಾರ ಸಂಘಕ್ಕೆ ಕೊಡುವೆನು'' ಎಂದು ತಿಳಿಸಿದರು. ಅಲ್ಲದೆ 1999ರ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಕೋರಿಯವರು ಅಧ್ಯಕ್ಷೀಯ ಭಾಷಣದಲ್ಲಿ ಸಂಘವು ನಡೆಸಿದ ಕಾರ್ಯಗಳನ್ನು ಶ್ಲಾಘಿಸಿ ಸಂಘಕ್ಕೆ ಯಶ ಕೋರಿ ತನ್ನ ಸಹಕಾರ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷ ಡಾ. ಕೆ. ರಘುನಾಥ್ ನಿರ್ವಹಿಸಿದರು. ಸಂಘದ ಗೌ. ಪ್ರ. ಕಾರ್ಯದರ್ಶಿ ಗುರುರಾಜ ಎಸ್. ನಾಯಕ್ ಅವರು ವಂದನಾರ್ಪಣೆ ಮಾಡಿದರು. ಮನೋರಂಜನೆಯ ಅಂಗವಾಗಿ 'ಹೆಂಡ್ತಿ ಹೇಳಿದರೆ ಕೇಳಬೇಕು' ಚಲನಚಿತ್ರ ಪ್ರದರ್ಶಿಸಲಾಯಿತು.

### ಗೋರೆಗಾಂವ್‌ನಲ್ಲಿ ವಿಶಿಷ್ಟ ಸಾಂಸ್ಕೃತಿಕ ಶಿಬಿರ


ಮುಂಬಯಿ: ಗೋರೆಗಾಂವ್ ಕರ್ನಾಟಕ ಸಂಘದ ಗ್ರಂಥಾಲಯನ ಹಾಗೂ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಇವರು ಜಂಟಿಯಾಗಿ ಆಯೋಜಿಸಿದ್ದ 'ಮುಬಯಿ ಸಂಘ ಸಂಸ್ಥೆಗಳು ನಿನ್ನೆ-ಇಂದು-ನಾಳೆ' ಎಂಬ ಮೂರು ದಿನಗಳ ವಿಶಿಷ್ಟ ಸಾಂಸ್ಕೃತಿಕ ಶಿಬಿರವು ಇತ್ತೀಚೆಗೆ ಯಶಸ್ವಿಯಾಗಿ ಮುಕ್ತಾಯವಾಯಿತು. ಈ ಶಿಬಿರವನ್ನು ಗೋರೆಗಾಂವ್ ಕರ್ನಾಟಕ ಸಂಘದ ಅಧ್ಯಕ್ಷರಾದ ಶಕುಂತಲಾ ಆರ್. ಪ್ರಭು ಅವರು ಉದ್ಘಾಟಿಸಿದರು.

ಶಿಬಿರದ ನಿರ್ದೇಶಕರಾದ, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕರಾದ ಡಾ. ತಾಳ್ತಜೆ ವಸಂತಕುಮಾರ ಅವರು ಮಾತನಾಡುತ್ತಾ ವ್ಯಕ್ತಿಗತ ಲಾಭ, ನೇತಾರ ಗುಣ, ಸಂವಹನ ಕೌಶಲ ಸಂಕ್ಷಿಪ್ತತೆ, ನಿರ್ಣಯ ಪಾತ್ರತೆ- ಈ ಎಲ್ಲಾ ದೃಷ್ಟಿಗಳಿಂದಲೂ ಇದೊಂದು ಅನನ್ಯ ಶಿಬಿರವೆಂದು ಹೇಳಿ ಶಿಬಿರದ ಸ್ವರೂಪವನ್ನು ಕುರಿತು ವಿವರಿಸಿದರು. ಇಂತಹ ಶಿಬಿರಗಳು ಸೃಜನ ಶೀಲತೆಗೆ ಉದ್ದೀಪನವಾಗಬಲ್ಲವು. ಕನ್ನಡವನ್ನು ರಾಷ್ಟ್ರೀಯ ಮಟ್ಟದಲ್ಲಿ ಎತ್ತುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ವ್ಯಾಸರಾವ್ ನಿಂಜೂರು ಅವರು ಮುಂಬಯಿಯ ಕನ್ನಡ ಸಂಘ ಸಂಸ್ಥೆಗಳ ಚಾರಿತ್ರಿಕ ಹಿನ್ನಲೆಯನ್ನು ವಿವರಿಸಿದರು. ಕೆ. ಮಂಜುನಾಥಯ್ಯ ಅವರು ಪ್ರಸ್ತುತ ಸ್ಥಿತಿಗತಿಯ ಕುರಿತು ಮಾತನಾಡುತ್ತಾ ಸಂಘದ ಸದಸ್ಯರಾಗುವುದು ಮಾತ್ರವಲ್ಲ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದೂ ಅಷ್ಟೇ ಮುಖ್ಯವಾದ ಅಂಶ ಎನ್ನುವುದನ್ನು 'ಸೋಶಿಯಲ್ ಆಡಿಟ್' ಎಂಬ ಪರಿಕಲ್ಪನೆಯ ಮುಖಾಂತರ ವಿವರಿಸಿದರು. ಭವಿಷ್ಯದ ಕುರಿತು ಕೆ.ಎಸ್. ಅನಂತ ಸುಬ್ಬರಾವ್ ಅವರು ತಮ್ಮ ವಿಚಾರಗಳನ್ನು ಹಂಚಿಕೊಂಡರು. ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಹಿರಿಯರಾದ ವಿ.ಪಿ. ಕೋಟ್ಯಾನ್, ಬಾಬು ಶಿವಪೂಜಾರಿ, ವಿದ್ವಾನ್ ರಾಮಚಂದ್ರ ಉಚ್ಚಿಲ್ ಅವರು ಈ ಶಿಬಿರದ ಅನುಭವ ಕಥನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಡಾ. ಮಣಿಮಾಲಿನಿ ವಿ.ಕೆ. ಅವರು ತೀರ್ಪುಗಾರರಾಗಿ ಸಹಕರಿಸಿದರು.

ಅನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಶಿಬಿರದ ನಿರ್ದೇಶಕರು, ಶಿಬಿರಾರ್ಥಿಗಳು

(ಮುಂದಿನ ಪುಟಕ್ಕೆ)



ಶ್ರೀ ಕಂಚಿಕಾಮಕೋಟಿ ಪೀಠದ ಹಿರಿಯ ಪೀಠದ ಹಿರಿಯ ಪೀಠಾಧಿಪತಿಗಳಾದ
ಶ್ರೀ ಜಯೇಂದ್ರ ಸರಸ್ವತಿಯವರು ಅಸೋಸಿಯೇಶನ್ನಿನ ಗಣಪತಿಗೆ ಪೂಜೆ ಗೈಯುತ್ತಿರುವುದು.


# THE MYSORE ASSOCIATION, BOMBAY

Cordially invites you

to a

**Bharatha Natyam recital**

by

**MEGHNA DORESWAMY**

&

**Auzar Irani, Puneetha Khanna and**

**S. Vaishnavi**

disciples of Mrs. Vijayalaxmi Suri

of

Nartaki School of Bharatha Natyam

on

Sunday, 19th March, 2000

at

6.30 p.m.

at

THE MYSORE ASSOCIATION AUDITORIUM
393, Bhaudaji Road, Matunga,
Mumbai – 400 019.


ಹಾಗೂ ಇತರ ಪ್ರಮುಖರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಸಮಗ್ರ ವರದಿಯನ್ನು ಡಾ. ಜಿ.ಎನ್. ಉಪಾಧ್ಯ ಅವರು ಮಂಡಿಸಿದರು. ಮುಂಬಯಿಯಿಂದ ಆಯ್ದ ಮಂದಿಯನ್ನು ಈ ಶಿಬಿರಕ್ಕೆ ಆಯ್ಕೆ ಮಾಡಿದ್ದು, 5 ಗುಂಪುಗಳಾಗಿ ವಿಂಗಡಿಸಿ, ಪ್ರಾಯೋಗಿಕ ನೆಲೆಯಲ್ಲಿ ಈ ಶಿಬಿರವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು. ಶಿಬಿರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೃಜನಶೀಲತೆಯನ್ನು ತೋರ್ಪಡಿಸಿದ ಡಾ. ಸುನೀತಿ ಉದ್ಯಾವರ, ಶ್ರೀ ಸಾ. ದಯಾ ಅವರು ಮೊದಲ ಹಾಗೂ ದ್ವಿತೀಯ ಬಹುಮಾನಗಳನ್ನು ಗಳಿಸಿದರು. ತಂಡಗಳ ಪ್ರದರ್ಶನದ ಹಿನ್ನೆಲೆಯಲ್ಲಿ ಮೊದಲ ಬಹುಮಾನವನ್ನು 'ಪಂಪ' ತಂಡ ಪಡೆದುಕೊಂಡರೆ ದ್ವಿತೀಯ ಬಹುಮಾನವು, 'ಹೊನ್ನಮ್ಮ' ತಂಡದವರಿಗೆ ಲಭಿಸಿತ್ತು. ತೃತೀಯ ಬಹುಮಾನವು 'ರನ್ನ' ತಂಡದವರಿಗೆ ಸಿಕ್ಕಿತು. ಎಸ್.ಕೆ. ಕುಂದರ್ ಅವರು ಕೊನೆಯಲ್ಲಿ ವಂದಿಸಿದರು.



ಯತಿದ್ವಯರ ದರ್ಶನಕ್ಕಾಗಿ ಆಗಮಿಸಿದ ಭಕ್ತವೃಂದ

Regn. No. 040015/86
Nesaru Tingalole March 2000
Regn. No. TECH/47-202/MBI-2000
Date of Posting : 10-3-2000

## ದೇವಿ

(ಪುಟ 7ರಿಂದ)

ಕಾಲೇಜಿಗೆ ಹೋಗಿದ್ದು, ಸಿನಿಮಾ ತೆಗೆದದ್ದು ಎಲ್ಲವನ್ನೂ ತೋರಿಸಬಹುದು. ಅದರಲ್ಲಿ ಕಾಲು ಗಂಟೆ.... ದೇವಿಯನ್ನು ನೆನೆದ ಚಿತ್ರ ಇರುತ್ತೆ' ಅಂದ. ದೇವಿ ಗಟ್ಟಿಯಾಗಿ ನಕ್ಕಳು. ಅದು ನಾಯ್ಡುವಿನ ಲೋಕದ ನಗೆಯಲ್ಲ. ಮನುಷ್ಯನೆದುರು ಕೋಗಿಲೆಯ ಸದ್ದಿನಂತೆ, ಮನುಷ್ಯನೆದುರು ಕೋಳಿ-ಹುಂಜದ ಕಾಮಕೇಳಿಯಂತೆ. ನಾಯ್ಡು ಅವಳ ಹತ್ತಿರ ಸರಿದು ಅವಳ ಬೆನ್ನಿಗೆ ಕೈ ಹಾಕಿ ಮೃದುವಾಗಿ ಎಳೆದುಕೊಂಡ; ದೇವಿಯ ನಗು ಇಂಗಿತು. ಆದರೆ ಖುಷಿ ಇಂಗಲಿಲ್ಲ. ಆಕೆ ಪ್ರತಿಭಟಿಸಲಿಲ್ಲ. ಅವನ ಭುಜಕ್ಕೆ ಕೈ ಹಾಕಿ ಕಣ್ಣಲ್ಲಿ ಕಣ್ಣಿಟ್ಟಳು. ದೇವಿ ಆಗಲೂ ನಾಯ್ಡುವಿನಿಂದ ದೂರವೇ ಇದ್ದಳು. ಕುಡಿದ ಅಮಲಿನಲ್ಲಿ ನಾಯ್ಡು ಅತ್ತು ಬಿಟ್ಟ. ಅಳು, ಹುಟ್ಟು, ಸಂತೋಷ, ವಿಷಾದದ ನಗೆ. ದೇವಿಯ ಎದುರು ಆತನಲ್ಲಿ ಪ್ರೇಮ ಹುಟ್ಟಿತು. ಖುಷಿ ಹುಟ್ಟಿತ್ತು. ವಿಷಾದ ಹುಟ್ಟಿತ್ತು. 'ನಾನು ನಿನ್ನೊಂದಿಗೇ ಇದ್ದು ಬಿಡಬೇಕೆಂದು ಅನ್ನುತ್ತೆ' ಅಂದ ನಾಯ್ಡು. 'ಇರಿ' ಅಂದಳು ದೇವಿ. ಅವೆಲ್ಲ ಔಪಚಾರಿಕ, ವ್ಯವಹಾರಿಕ ಮಾತುಗಳು.

ಈ ವಿಷಯವೆಲ್ಲ ಚಂದ್ರಪ್ಪನಿಗೆ ಗೊತ್ತಾಗಿ ತಮಾಷೆ ಮಾಡಿಕೊಂಡು ನಕ್ಕಿದ್ದ. ಆಗ ದೇವಿ ಸಿಗುತ್ತಲೇ ಅವನ ಮುಖ ನೋಡಿದ್ದಳು. ಚಂದ್ರಪ್ಪ ತನ್ನ ಗಂಡ ವರ್ಗ, ಬಡ್ತಿ, ತಹಶೀಲ್ದಾರ; ಆಮೇಲೆ ಅಸಿಸ್ಟೆಂಟ್ ಕಮಿಶನರ್ ಆದ ಚಂದ್ರಪ್ಪ. ದೇವಿಯಲ್ಲಿ ಬೆಳೆಯುತ್ತ ಹೋದ ತಿಳುವಳಿಕೆ, ನಿಗೂಢತೆ, ವಿವಿಧಾರ್ಥಗಳ ನಗೆ, ಒಮ್ಮೆ ಹೀಗಾಯಿತು. ಅದಾದದ್ದು ಚಿತ್ರದುರ್ಗದಲ್ಲಿದ್ದಾಗ. ಚಂದ್ರಪ್ಪನಿಗೆ ಒಳ್ಳೆಯ ಹೆಸರಿತ್ತು. ಕಂತ್ರಿ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು, ಅಸಹಾಯಕ ಜನರು ಎಲ್ಲವನ್ನೂ ಕಂಡಿದ್ದ ಚಂದ್ರಪ್ಪ. ಇಲ್ಲಿ ನಿಷ್ಠುರತೆಗಿಂತ ಸಹನೆ ಮತ್ತು ಸ್ನೇಹ ಪರಿಣಾಮಕಾರಿ ಎಂಬುದನ್ನು, ಒಳ್ಳೆಯತನಕ್ಕಿಂತ ಚಾಣಾಕ್ಷತೆ ಉತ್ತಮವೆಂಬುದನ್ನು, ಸಿಟ್ಟಿಗಿಂತ ತಂತ್ರ ಉಪಕಾರಿ ಎಂಬುದನ್ನು ಚಂದ್ರಪ್ಪ ಕಂಡುಕೊಂಡಿದ್ದ. ಅವತ್ತು ಬೆಳಗ್ಗೆಯೇ ದೇವಿಗೆ ಮನೆಗೆ ಅತಿಥಿಗಳು ಬರುವ ವಿಚಾರ ಹೇಳಿದ್ದ. ಸಂಜೆ ಚಂದ್ರಪ್ಪನ ಕಾರು ಬಂತು. ದೇವಿಗೆ ಪ್ರತಿಯೊಂದು ಕಾರಿನ ಸೂಕ್ಷ್ಮ ವ್ಯತ್ಯಾಸವೂ ಗೊತ್ತಿತ್ತು; ಅವುಗಳ ಸದ್ದಿನ, ನಿಲ್ಲುವ ಶೈಲಿಯ ವ್ಯತ್ಯಾಸ ಕೂಡ. ಚಂದ್ರಪ್ಪ ಬಂದ. ಅತಿಥಿಗಳು ಬಂದರು. ಹರಟೆ ಶುರುವಾಯಿತು. ಅವರೆಲ್ಲ ಯಶಸ್ವೀ ಜನ. ಒಂದು ಪೆಗ್ ಜಿನ್ ಬಿದ್ದರೆ ಹತ್ತು ಪಟ್ಟು ಅಹಂಕಾರದೊಂದಿಗೆ ಸೇರಿಕೊಂಡು ಸ್ವಪ್ರತಿಷ್ಠರಾಗುವ ಜನ. ಅವರು ಹರಟೆ ಕೊಚ್ಚುತ್ತಿದ್ದಾಗ ದೇವಿ ಒಳಗಿದ್ದಳು. ಹರಟೆ ವಿಚಿತ್ರ ದಾರಿಗಳಲ್ಲಿ ಸಾಗಿತು; ಅವರೆಲ್ಲರ ಅನುಭವ. ಚಂದ್ರಪ್ಪ ಅಷ್ಟಾಗಿ ಕುಡಿಯುವವನಲ್ಲ. ಇದಕ್ಕಿದ್ದಂತೆ ಕತೆ ಶುರು ಮಾಡಿದ; ಬಾಗಲುಕೋಟೆಯಲ್ಲಿ ಅಧಿಕಾರಿಯಾಗಿದ್ದಾಗ, ತಮ್ಮ ಆಫೀಸಿನ ಹತ್ತಿರದ ಶಾಲೆಯ ಜಾನೆಟ್-ಹೌದು, ಆಕೆಯ ಹೆಸರು ಜಾನೆಟ್ ಗೀತಾ. ತಡವರಿಸುತ್ತಾ ಕತೆ ಮುಗಿಸಿದ್ದ, 'ಅದು ನನ್ನ ನಿಜವಾದ ಮೊದಲ ರಾತ್ರಿ.' ಈಗ ದೇವಿ ಅವನ ಕುರ್ಚಿಯ ಹಿಂದೆ ನಿಂತು ನಗುತ್ತಿದ್ದಳು. ಚಂದ್ರಪ್ಪ ಮತ್ತು ದೇವಿಯನ್ನು ಕಂಡ ಅತಿಥಿಗಳು ಹೆಪ್ಪುಗಟ್ಟಿ ಕೂತರು.

ಮರುದಿನ ಚಂದ್ರಪ್ಪ ಮೊದಲ ದಿನ ಆಫೀಸಿಗೆ ಹೋಗುವಾಗ ಆತಂಕಗೊಂಡಷ್ಟೇ ಖಿನ್ನನಾಗಿದ್ದ. ಆಗ ಚಿಕ್ಕ ಮನೆಯಲ್ಲಿ, ಈಗ ಬಂಗಲೆಯಲ್ಲಿ. ಬಟ್ಟೆ ಹಾಕಿಕೊಂಡ. ದೇವಿಯ ಸಿಟ್ಟನ್ನು ಎದುರಿಸಲು ಮನಸ್ಸು ಸಿದ್ಧ ಮಾಡಿಕೊಂಡ ಕಾರಿನ ಕೀಲಿ ಕೈ, ಪುಟ್ಟ ವಾಲೆಟ್ ತೆಗೆದುಕೊಂಡ. ದೇವಿ ಬೀಳ್ಕೊಡಲು ಬಂದಳು. ಅವನ ಆತಂಕ ಅರಿತಿದ್ದಂತೆ ಹತ್ತಿರ ಬಂದು ಅಪ್ಪಿಕೊಂಡಳು. ಮೆಲ್ಲಗೆ ಕುರ್ಚಿಯಲ್ಲಿ ಕೂರಿಸಿದಳು. ಅವನ ಮುಖ, ಕಣ್ಣು, ಮೂಗು, ಕುತ್ತಿಗೆ, ಕೂದಲು ನೋಡಿದಳು. ನೇವರಿಸಿದಳು. ವರ್ಷಗಳ ಹಿಂದೆ, ಚಪ್ಪರದ ಅವರೆಯೆಂಬಂತೆ ತನ್ನನ್ನು ಕಿತ್ತುಕೊಂಡವನು. ಲಜ್ಜೆ ತುಂಬಿದವನು. ಸಿಟ್ಟು, ಆದರ್ಶ ತುಂಬಿದವನು. ಈಗ ವಯಸ್ಸಿನ ಪೊರೆ, ಒಳಗೆ ಮುರಿದು ಬಿದ್ದ ಆಧಾರಗಳು. ಸಣ್ಣಗೆ ಕರಗಿ ಹೋದ ಯೌವನ, ವ್ಯವಹಾರ ಎಂಬ ನಾಚಿಕೆಗೆಟ್ಟ ಕ್ರಿಯೆಯಲ್ಲಿ ಸುಟ್ಟು ಹೋದ ನಡುವಯಸ್ಸು. ಮೊದಲ ರಾತ್ರಿಯ ಹುಟ್ಟು, ಸಂತೋಷ, ವಿಷಾದವೆಲ್ಲ ಕೊನೆಯ ಹಂತ ತಲುಪುತ್ತಿರುವ ಸ್ಥಿತಿ. ಚಂದ್ರಪ್ಪ ಆಫೀಸಿಗೆ ಹೋದ. ಅವನ ಮುಗುಡ ಕಮ್ಮಿಯಾಗಿತ್ತು.

ಚತುರೆ ದೇವಿ. ವಯಸ್ಸು ಬೀಟೆಯ ಮರದಂತೆ ಗಟ್ಟಿ ಮಾಡುತ್ತ ಅನ್ನುವಳು; ತಾನು ಚಿಕ್ಕಂದಿನಲ್ಲಿ ಕೇಳಿದ ಕತೆಗಳನ್ನೆಲ್ಲ ನಗುನಗುತ್ತ ಹೇಳುವಳು. ಇವತ್ತು ಕುಸುಮಳ ಮೊದಲ ರಾತ್ರಿ. ಗಾಢ ಕತ್ತಲೆ, ಪಕ್ಕದಲ್ಲಿ ಬಿಳಿ ತಲೆಯ ಚಂದ್ರಪ್ಪ. ನಿದ್ರಿಸಲು ತವಕವೇ ಇಲ್ಲದ ದೇವಿ ಸುಮ್ಮನೇ ಮಲಗಿ ಛಾವಣಿ ನೋಡುತ್ತಿದ್ದಾಳೆ. ಈ ಮೊದಲ ರಾತ್ರಿ; ತಾನು ಲಜ್ಜೆಯಾಗಬಹುದು ಎಂದುಕೊಳ್ಳುವಳು. ಹುಟ್ಟು, ಮುಪ್ಪು, ಸಂವೇದನೆಯ ಮೊದಲ ರಾತ್ರಿ. ದೇವಿ ಎದ್ದಳು. ಬೆಳಕು ಹರಿಯತೊಡಗಿತ್ತು. ಯಾರನ್ನೂ ಎಬ್ಬಿಸಲು ಹೋಗಲಿಲ್ಲ. ದೇವಿ ಉದಾರಿ, ನಿದ್ರೆ ಮೈಥುನ, ಎಲ್ಲವನ್ನೂ ಕುರಿತು ಉದಾರಿ ದೇವಿ. ಅಡಿಗೆ ಮನೆಗೆ ಹೋದಳು. ಕಾಫಿಗೆ ನೀರನ್ನಿಟ್ಟು ತೋಟಕ್ಕೆ ಹೋದಳು. ಅಲ್ಲಿಂದ ಮಗಳು ಕುಸುಮ ಮತ್ತು ಅಳಿಯ ಏಕಾಂತ ಅಪ್ಪಿಕೊಂಡು ಮಲಗಿದ್ದು ಕಾಣಿಸಿತು. ಪ್ರಾಣಿಗಳು, ಶುದ್ಧ ಪ್ರಾಣಿಗಳು ಎಂದು ನಕ್ಕು ನಂದಿ ಬಟ್ಟಲು ಹೂ ಕಿತ್ತುಕೊಂಡು ಕಣ್ಣಿಗೆ ತಣ್ಣಗೆ ಒತ್ತಿಕೊಂಡಳು. ●

STATEMENT ABOUT OWNERSHIP AND OTHER PARTICULARS OF NESARU TINGALOLE

| | | |
|---|---|---|
| 1. Place of Publication | : | Mumbai |
| 2. Perdiodicity of Publication | : | Monthly |
| 3. Printer's Name | : | Aarati Art Printers |
| Citizenship | : | India |
| Address | : | 101, Varma Chambers, 11, Homji Street, Fort, Mumbai-400 001. |
| 4. Publisher's Name | : | M. A. N. Prasad |
| Citizenship | : | India |
| Address | : | C/o. The Mysore Association, 393, Bhaudaji Road, Matunga, Mumbai-400 019. |
| 5. Editor's Name | : | M. A. N. Prasad |
| Citizenship | : | India |
| Address | : | C/o. The Mysore Association, 393, Bhaudaji Road, Matunga, Mumbai-400 019. |
| 6. Name & Address of the Owner of Newspaper | : | The Mysore Association, 393, Bhaudaji Road, Matunga, Mumbai-400 019. |

I, M. A. N. Prasad hereby declare that the particulars given above are true to best of my knowledge and belief.